1 ಕೆ.ಜಿ. ಪ್ರಮಾಣದಲ್ಲಿ ಕೊಡಬೇಕು ಗ್ರಾಮಾಂತರ ಪ್ರದೇಶಗಳಲ್ಲಿ ಅರ್ಧ ಕೆ.ಜಿ. ಪ್ರಮಾಣದಲ್ಲಿ ಕೊಡಬೇಕೆನ್ನುವ ತೀರ್ಮಾನ ಮಾಡಿ ಹಂಚಿಕೆ ಮಾಡಿದ್ದೇವೆ. ಮಾನ್ಯ ಸದಸ್ಯರ ಕೂಗು ಏನು ಇದೆ ಆ ಪ್ರಕಾರ ಹೆಚ್ಚು ಮಾಡಬೇಕಾದರೆ ಕೇಂದ್ರ ಸರ್ಕಾರದಿಂದ ನಮಗೆ ಎಣ್ಣೆ ಬಂದ ಹೊರತು ನಾವು ಕೊಡಲು ಸಾಧ್ಯವಿಲ್ಲ.

(ಗೊಂದಲ)

ಶ್ರೀ ಎ.ಬಿ. ಜಕನೂರು: ಗ್ರಾಮಾಂತರ ಪ್ರದೇಶಗಳಿಗೆ ಕಡಿಮೆ ಸಕ್ಕರೆ ಪಟ್ಟಣ ಪ್ರದೇಶಗಳಿಗೆ ಜಾಸ್ತಿ ಸಕ್ಕರೆ ಕೊಡುತ್ತೀರಿ ಈ ತಾರತಮ್ಯವನ್ನು ನಿವಾರಣೆ ಮಾಡಿ.

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಮ್ಮ ಸರ್ಕಾರ ಬಂದ ಮೇಲೆ ಹಿಂದಿನ ಸರ್ಕಾರದ ನೀತಿ ಏನು ಇತ್ತೊ ಅದನ್ನೇ ನಾವು ಮುಂದುವರಿಸಿಕೊಂಡು ಬಂದಿದ್ದೇವೆ. ಬೇರೆ ವ್ಯವಸ್ಥೆ ಏನೂ ಮಾಡಿಲ್ಲ ಗ್ರಾಮಾಂತರ ಪ್ರದೇಶಗಳಿಗೂ ಪಟ್ಟಣ ಪ್ರದೇಶಗಳಿಗೂ ಇರುವ ತಾರತಮ್ಯವನ್ನು ನಿವಾರಣೆ ಮಾಡಿ ಎಂಬ ವಾದ ಇದೆ. ಖಂಡಿತವಾಗಿ ಸರ್ಕಾರ ಇದನ್ನು ಪರಿಶೀಲನೆ ಮಾಡಿ ಗ್ರಾಮಾಂತರ ಪ್ರದೇಶದ ಜನತೆಗೂ ಕೂಡ ಸಾಮಾಜಿಕವಾಗಿ ನ್ಯಾಯಬದ್ಧವಾಗಿ ಕೊಡಲು ಪ್ರಯತ್ನ ಮಾಡುತ್ತೇನೆ.

(ಗೊಂದಲ)

ಉಪಾಧ್ಯಾಕ್ಷರು : ಸ್ಟೇಟ್‌ಮೆಂಟ್ ಮೇಲೆ ಚರ್ಚೆ ಇಲ್ಲ. ವಾಟಾಳ್ ನಾಗರಾಜ್‌ರವರೇ ತಾವು ಮಾತನಾಡಿ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರಿದಿದ್ದು)

5.30 ಪಿ.ಎಂ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನಾವು ಈ ಸದನಕ್ಕೆ ಬಂದ ಮೇಲೆ ಇಲ್ಲಿಯವರೆಗೂ 3 ಜನ ರಾಜ್ಯಪಾಲರ ಭಾಷಣವನ್ನು ಕೇಳಿದ್ದೇನೆ. ಎಲ್ಲಾ ರಾಜ್ಯಪಾಲರ ಭಾಷಣದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಧಾಟಿಯೆಲ್ಲಾ ಒಂದೇ. ಮಾನ್ಯ ಬಂಗಾರಪ್ಪನವರ ಸರ್ಕಾರ ಧಾಟಿಯಲ್ಲಿ ಸ್ವಲ್ಪ ನಾಜೂಕನ್ನು ತೋರಿಸಿದ್ದಾರೆ. ಇದರಲ್ಲಿ ಸ್ವಲ್ಪ ಪ್ರಚಾರ ತಂತ್ರವನ್ನು ಉಪಯೋಗಿಸಿದ್ದಾರೆ. ಮಾನ್ಯ ಬಂಗಾರಪ್ಪನವರು ಮೊದಲಿನಿಂದಲೂ ಆ ಪ್ರಚಾರ ತಂತ್ರದಲ್ಲಿ ಬಹಳ ಪ್ರವೀಣರು, ಅದರಲ್ಲಿ ಎರಡನೆ ಅಭಿಪ್ರಾಯವಿಲ್ಲ. ರಾಜ್ಯದ ನಾಯಕತ್ವದ ಬಗ್ಗೆ ಹೇಳುವುದಾದರೆ, ಕರ್ನಾಟಕ ರಾಜ್ಯದ ನಾಯಕತ್ವ ಒಂದು ಕಾಲದಲ್ಲಿ ಬಹಳ ಉನ್ನತ ಮಟ್ಟಕ್ಕೆ ಹೋಗಿತ್ತು. ಆಗ ದೆಹಲಿಯ ದೊರೆಗಳು ಕರ್ನಾಟಕದ ನಾಯಕತ್ವಕ್ಕೆ ಹೆದರುತ್ತಿದ್ದರು. ಇವತ್ತು ನಾವು ಅವರನ್ನು ನೆನೆದುಕೊಳ್ಳಬೇಕು. ಈ ವಿಧಾನ ಸೌಧವನ್ನು ಕಟ್ಟಿಸಿದಂಥ ಕೆಂಗಲ್ ಹನುಮಂತಯ್ಯನವರನ್ನು ಕಂಡರೆ ಕೇಂದ್ರ ಹೆದರುತ್ತಿತ್ತು. ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಕೇಂದ್ರ ಹೆದರುತ್ತಿತ್ತು. ಶ್ರೀಮಾನ್ ದೇವರಾಜ ಅರಸ್‌ರವರ ಕಾಲದಲ್ಲೂ ಕೇಂದ್ರ ನಿಜವಾಗಲೂ ಹೆದರುತ್ತಿತ್ತು. ಸ್ವಲ್ಪ ಇತ್ತೀಚಿನ ದಿನಗಳಲ್ಲಿ ರಾಜಕೀಯದ ವಾದ ವಿವಾದಗಳು ಏನೇ ಇದ್ದರೂ ವೀರೇಂದ್ರ ಪಾಟೀಲರ ಮತ್ತು ಹೆಗಡೆಯವರ ಮಾತು ಇಲ್ಲಿ ತರಬೇಕಾಗಿದೆ.

ಹಿಂದೆ ಯಾವ ತರಹ ಇತ್ತೆಂದರೆ, ಕರ್ನಾಟಕದ ನಾಯಕತ್ವದ ಪ್ರಶ್ನೆ ಬಂದಾಗ ಈ ಜನ ನಿಜವಾಗಲೂ ದೆಹಲಿಯನ್ನು ಕರ್ನಾಟಕ್ಕೆ ತಂದಿದ್ದರು. ಆದರೆ ಇವತ್ತು ಕರ್ನಾಟಕ ದೆಹಲಿಗೆ ಹೋಗುತ್ತಿದೆ. ಇವತ್ತು ಈ ಪರಿಸ್ಥಿತಿ ಉದ್ಭವಾಗಿದೆ. ಕರ್ನಾಟಕದಲ್ಲಿ ನಾಯಕತ್ವದ ಅಭಾವ ತೀವ್ರವಾಗಿದೆ. ನಮ್ಮ ಕರ್ನಾಟಕವನ್ನು ಒಂದಲ್ಲ ಒಂದು ರೀತಿಯಲ್ಲಿ ಆಳುತ್ತಿರತಕ್ಕಂಥವರು,ಸೂತ್ರವನ್ನು ಹಿಡಿದಿರತಕ್ಕಂಥವರು ಕೇಂದ್ರದ ಒಂದಲ್ಲಾ

ಒಂದು ಅಧಿಕಾರ ವರ್ಗದ ಗುಂಪು. ನಮ್ಮ ರಾಜ್ಯದ ಮಂತ್ರಿ ಮಂಡಲದಲ್ಲಿ ಅನೇಕ ಮಂತ್ರಿಗಳು ಅಂದರೆ ಸ್ವಂತ ಚೈತನ್ಯಕ್ಕಿಂತ ಹೆಚ್ಚಾಗಿ ಕೇಂದ್ರದಿಂದ ನೇಮಿಸಿದಂಥವರೇ ಇದ್ದಾರೆ. ಅದರಲ್ಲಿ ಬೇರೆ ಮಾತಿಲ್ಲ. ಒಬ್ಬೊಬ್ಬರು ಒಬ್ಬೊಬ್ಬ ಮಂತ್ರಿಗಳನ್ನು ನೇಮಿಸಿದ್ದಾರೆ. ಅದು ಸರಿಹೋಗುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಒಂದು ಕಡೆ ಈ ರಾಜ್ಯವನ್ನು ಯಾವ ದಿಕ್ಕಿಗೆ ತೆಗೆದುಕೊಂಡು ಹೋಗುತ್ತಿದ್ದೇನೆಂದು ಹೇಳಿದ್ದಾರೆ. ಇಡೀ ಮಂತ್ರಿ ಮಂಡಲವೇ ದಿಕ್ಕು ತಪ್ಪಿದೆ. ಮಂತ್ರಿ ಮಂಡಲದಲ್ಲಿ ಒಬ್ಬೊರಿಗೊಬ್ಬರಿಗೆ ಸಾಮರಸ್ಯವಿಲ್ಲ. ಎಲ್ಲವೂ ಸಮಗ್ರ ಮಂತ್ರಿ ಮಂಡಲದ ಜವಾಬ್ದಾರಿ ಎನ್ನತಕ್ಕಂಥಾದ್ದಿಲ್ಲ. ನಾವು ಮುಖ್ಯ ಮಂತ್ರಿಗಳಿಂದ ಮಂತ್ರಿಯಾಗಿರುವವರಲ್ಲ ಕೇಂದ್ರದ ಸಹಾಯದಿಂದ ಮಂತ್ರಿಯಾಗಿದ್ದೇವೆ, ಇವರ ಮಾತನ್ನು ಏಕೆ ಕೇಳಬೇಕೆನ್ನುವ ಒಂದು ವರ್ಗ, ಗುಂಪು ಇಲ್ಲಿದೆ. ಅದರಲ್ಲಿ ಬದಲಾವಣೆ ಏನೂ ಇಲ್ಲ.

ಶ್ರೀ ಎ.ಬಿ. ಜಕನೂರ್ : ಇದನ್ನು ನಿಮಗೆ ಯಾರು ಹೇಳಿದರು?

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತಿರುವುದೆ ಹೇಳುತ್ತಿರುವುದು, ಬೇರೆ ವಿಚಾರ ಹೇಳುತ್ತಾ ಇಲ್ಲ. ಈಗ ಮತ್ತೆ ಇನ್ನೂ 15 ಜನರನ್ನು ಕೇಂದ್ರದವರು ಹೇಳಿದವರನ್ನು ಸಚಿವ ಸಂಪುಟಕ್ಕೆ ತೆಗೆದುಕೊಳ್ಳುವ ಬಗ್ಗೆ ಸುಮಾರು ಎರಡು ತಿಂಗಳಿಂದ ನಡೆಯುತ್ತಿದೆ. ಇದರ ಬಗ್ಗೆ ಅನೇಕ ಭೋಜನ ಕೂಟಗಳಾಯಿತು, ಬಹು ಜನ ಕೂಟಗಳೂ ಆಯಿತು. ರಾತ್ರಿ ಕೂಟಗಳಾಯಿತು, ಎಲ್ಲಾ ಕೂಟಗಳು ಮುಗಿದ ಮೇಲೆ ಬಹಳ ಜನ ರೆಡಿಯಾಗಿದ್ದರು. ಪೋಷಾಕುಗಳನ್ನು ಹಾಕಿಕೊಂಡು ರಾಜಭವನಕ್ಕೆ ಹೋಗುವುದಕ್ಕೆ ರೆಡಿಯಾಗಿದ್ದರು.

24ನೇ ತಾರೀಖು ಎಂದು ಒಬ್ಬ ಶಾಸಕರು ಹೇಳಿದರು. ಬೇಕಾದ್ದು ಆಗಲಿ . ನೀವು ಹೇಳುವುದು ಸುಳ್ಳು ಎಂದು ಹೇಳಿದರು. ಚುನಾವಣೆ ಬಂತು ನಿಮ್ಮ ಕಥೆ ಮುಗಿಯಿತು ಎಂದು ನಾನು ಹೇಳಿದೆ. ಇಲ್ಲ ಇಲ್ಲ 24ನೇ ತಾರೀಖು ನೀವು ನೋಡಿ, ನಾವು ರಾಜಭವನಕ್ಕೆ ಹೋಗುತ್ತೇವೆ ಎಂದು ಹೇಳಿದರು. ಇದೇ ತಿಂಗಳ 24ನೇ ತಾರೀಖು ಎಂದು ಹೇಳಿದರು. ಈಗ ರಾಜಭವನಕ್ಕೆ ಹೋಗುವ ಮಾತು ಇರಲಿ, ಸ್ವಲ್ಪ ದಾರಿ ತಪ್ಪಿದರೆ, ಅದೃಷ್ಟ ತಪ್ಪಿದರೆ ಎಲ್ಲರೂ ಮನೆಗೇ ಹೋಗಬೇಕಾಗಿತ್ತು. ಏನೇ ಸ್ವಲ್ಪ ಖೋಟಾ ಸರಿ ಇರುವುದರಿಂದ ಮನೆಗೆ ಹೋಗದೆ ಉಳಿದಿದ್ದಾರೆ. ನಾನು ತಮ್ಮ ಮುಖೇನ ಹೇಳುವುದು ಏನೆಂದರೆ ....

ಶ್ರೀ ಆರ್ ದಯಾನಂದ ರಾವ್ : ಸಮಯ ಬಂದರೆ ತಾವು ಮನೆಗೆ ಹೋಗಬೇಕಾಗುತ್ತದೆ.

ಶ್ರೀ ಕರಿಯಣ್ಣ : ನಮ್ಮ ಜೊತೆಗೆ ನೀವು ಬರಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಜೊತೆ ನಾನು ಏಕೆ ಬರಲಿ. ನಿಮ್ಮ ಜೊತೆಯಲ್ಲಿ ಬರುವವರು ಬೇರೆಯವರು. ನೀವು ಮಂತ್ರಿಗಳಾಗುತ್ತೀರ.

ಶ್ರೀ ಕರಿಯಣ್ಣ : ನಾವು ಮಂತ್ರಿ ಮಂಡಲ ವಿಸ್ತರಣೆ ಮಾಡುವುದರಲ್ಲಿ ನಿಮಗೆ ಏಕೆ ಅಸೂಯೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲರೂ ಉಡುಪುಗಳನ್ನು ಧರಿಸಿ ರಾಜಭವನಕ್ಕೆ ಇನ್ನೇನು ಹೋಗಬೇಕೆಂದಿದ್ದರು.

ಉಪಾಧ್ಯಕ್ಷರು : ರಾಜ್ಯ ಪಾಲರ ಭಾಷಣದ ಮೇಲೆ ಮಾತನಾಡಿ -

ಶ್ರೀ ವಾಟಾಳ್ ನಾಗರಾಜ್ : ಇದು ರಾಜ್ಯಪಾಲರ ಭಾಷಣವೇ? ರಾಜ್ಯಪಾಲರ ಭಾಷಣದ ಮೇಲೆ ಇಂತಿಷ್ಟೇ ವಿಚಾರ, ಹೀಗೇ ಮಾತನಾಡಬೇಕು ಎಂದು ಏನೂ ಇಲ್ಲ. ನಾನು ಸುಮಾರು 1967ರಿಂದ ಈ ಸಭೆಯಲ್ಲಿ ಇದ್ದೇನೆ.

ಉಪಾಧ್ಯಕ್ಷರು : ಒಳ್ಳೆಯ ಸಲಹೆಗಳನ್ನು ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಕೆಟ್ಟ ಸಲಹೆ ಎಂದು ಹೇಳುತ್ತೀರ.

ಶ್ರೀ ಎಂ. ಪಿ. ವೆಂಕಟೇಶ್ : ಅವರು ಮಾತನಾಡುವುದು ಎಲ್ಲರಿಗೂ ಹಿಡಿಸಿದೆ. ಆದ್ದರಿಂದ ಅವರು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ಬಹಳ ಜನರಿಗೆ ಪೋಷಾಕುಗಳನ್ನು ಧರಿಸಿ ರಾಜಭವನಕ್ಕೆ ಹೋಗಬೇಕು ಎನ್ನತಕ್ಕ ಅಭಿಲಾಷೆ ಇತ್ತು. ಅದೃಷವನ್ನು ಭವಿಷ್ಯವನ್ನು ಬಹಳ ಜನ ನೋಡಿದ್ದರು.

ಬಹಳ ಜಹ ಸದಸ್ಯರು ಶಾಸ್ತ್ರಕಾರರಿಗೆ ತಮ್ಮ ಕೈಗಳನ್ನು ತೋರಿಸಿ ಅವಲಕ್ಷಣ ಮಾಡಿಕೊಂಡಿದ್ದರು. ನಾನು ಕಂಡ ವಿಷಯವನ್ನು ಹೇಳುತ್ತಿದ್ದೇನೆ. ಇದರ ಜೊತೆಯಲ್ಲಿ ಒಂದು ಕಡೆ ಮಂತ್ರಿಗಳು ಆಗತಕ್ಕಂಥ ಚಿಂತನೆ ಕೆಲವು ಶಾಸಕರುಗಳಿಗೆ ಇತ್ತು. ಇನ್ನೊಂದು ಕಡೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಯಾರೋ ಏನೋ ಕಿವಿಯಲ್ಲಿ ಹೇಳಿದ್ದಾರೆ. ಯಾವ ಪುರೋಹಿತರು ಹೇಳಿದರೊ, ಯಾವ ಭವಿಷ್ಯಕಾರರು ಹೇಳಿದ್ದರೋ ಅಥವಾ ಜ್ಯೋತಿಷ್ಯಕಾರರು ಹೇಳಿದರೋ ಗೊತ್ತಿಲ್ಲ. ನಿಮ್ಮ ಅಧಿಕಾರ ಬಹಳ ದಿವಸ ಉಳಿಯುವುದಿಲ್ಲ. ಆದ್ದರಿಂದ ನೀವು ಹೋಮ ಮಾಡಿಸಬೇಕು, ಈ ಮನೆ ಬಿಡಬೇಕು, ಮತ್ತು ಎಲ್ಲಾ ದೇವರ ಹತ್ತಿರ ನೀವು ಹೋಗಬೇಕು ಎಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ದೇವಸ್ಥಾನಗಳಿಗೆ ಹೊರಟರು, ಹೊರಟರು. ರಾತ್ರಿ ರಾತ್ರಿ ಹೋಗಿದ್ದಾರೆ, ಬೆಳಿಗ್ಗೆ ಬೆಳಿಗ್ಗೆ ಹೋಗಿದ್ದಾರೆ. ತಮಿಳುನಾಡಿನಲ್ಲಿರುವ ತಮಿಳು ದೇವರುಗಳು, ಕನ್ನಡನಾಡಿನಲ್ಲಿರುವ ಕನ್ನಡ ದೇವರುಗಳು, ತೆಲುಗು ದೇವರುಗಳು, ಯಾವ ದೇವರುಗಳನ್ನು ಬಿಟ್ಟಿಲ್ಲ, ಸುಮಾರು ಮೂರು ತಿಂಗಳು.

ಶ್ರೀ ಎಂ. ಪಿ. ವೆಂಕಟೇಶ್ : ಶಬರಿ ಮಲೆಗೂ ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಶಬರಿ ಮಲೆಗೂ ಹೋಗಿದ್ದರು ಸಂತೋಷ, ಎಲ್ಲ ಕಡೆ ಹೋಗಿ ಬರಲಿ.ತಮಿಳುನಾಡಿನಲ್ಲಿ ಇನ್ಯಾವುದೋ ದೇವರು ಇದೆ ಎಂದು ಆ ದೇವಸ್ಥಾನಕ್ಕೂ ಹೋಗಿ ಬಂದರು. ಇದಾದ ಮೇಲೆ ಮನೆಯಲ್ಲಿ ಹೋಮ ಮಾಡಿಸಿದರು. ಇವರು ಸಮಾಜವಾದಿ ಹಿನ್ನಲೆಯಲ್ಲಿ ತಮ್ಮ ಸಿದ್ಧಾಂತವನ್ನು ಇಟ್ಟುಕೊಂಡು ಗೋಪಾಲ ಗೌಡರ ಜೊತೆಯಲ್ಲಿ ಬಂದಂತಹ ನನ್ನ ಮಿತ್ರರು. ಒಂದು ಕಾಲದಲ್ಲಿ ನಾವೆಲ್ಲಾ ಒಟ್ಟಿಗೆ ಇದ್ದವರು. ಈಗ ಅವರು ಮುಖ್ಯಮಂತ್ರಿಗಳಾದರು, ನಾವು ಇಲ್ಲಿ ಕುಳಿತಿದ್ದೇವೆ. ಒಂದು ಕಾಲದಲ್ಲಿ ನಾನು ಹಾಗೂ ಅವರು ಪಾರ್ಲಿಮೆಂಟಿನ ಮುಂದೆ ಮಹಾಜನ್ ವರದಿ ಕಾರ್ಯಗತ ಆಗಬೇಕು ಎಂದು ಒಂದು ನಿಯೋಗ ಹೋಗಿದ್ದೆವು. ಶ್ರೀ ಮಾನ್ ಎಸ್. ಶಿವಪ್ಪ ಅವರ ನಾಯಕತ್ವದಲ್ಲಿ ಹೋದಾಗ ನಾನೂ ಅವರೂ ಮಾತನಾಡಿ ಕೊಂಡೆವು. ಬರೀ ನಿಯೋಗ ಹೋಗಿ ಪತ್ರ ಕೊಡುವುದು ಸರಿಯಲ್ಲ ಏನು ಮಾಡೋಣ ಎಂದು ನಾವು ಇಬ್ಬರೂ ಮಾತನಾಡಿಕೊಂಡೆವು. ಅವರಿಗೆ ಬಹಳ ಉತ್ಸಾಹ ಅಭಿಮಾನ ಇತ್ತು. ದೆಹಲಿಗೆ ಹೋದಾಗ ನಾವಿಬ್ಬರೂ ಕೇಂದ್ರ ಸರ್ಕಾರದ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಮಾಡಿ ಬಂಧನದಲ್ಲಿ ಇದ್ದೆವು. ಅದು ಇರಲಿ. ಅದು 20-22 ವರ್ಷಗಳ ಹಿಂದೆ ನಡೆದದ್ದು. ಆಗ ನಾವು ಇಲ್ಲಿ ಕುಳಿತಿದ್ದೆವು. ಮಾನ್ಯ ಹೆಸ್. ಎನ್. ನಂಜೇಗೌಡರು, ಪುಟ್ಟದಾಸ್ ನಾವೆಲ್ಲ 3-4 ಜನ ಇಲ್ಲಿ ಬಹಳ ತೀವ್ರವಾಗಿ, ತೀಕ್ಷ್ಣವಾಗಿ ಮಾತನಾಡುತ್ತಿದ್ದೆವು. ಅವರು ಜನರಲ್ ಹಾಸ್ಟಲ್‌ನಲ್ಲಿ ಇರುತ್ತಿದ್ದರು, ನಾನೂ ಜನರಲ್ ಹಾಸ್ಟೆಲ್‌ನಲ್ಲಿ ಇರುತ್ತಿದ್ದೆ.

ಈಗ ಅವರು ಬೇರೆ, ನಾವು ಬೇರೆ, ಪರಿಸ್ಥಿತಿ ಬೇರೆ. ಇದು ಬೇರೆ ವಿಚಾರ, ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ನನಗೆ ಅನಿಸುತ್ತದೆ, ಇವರು ಏನೋ ಚುರುಕಾಗಿದ್ದಾರೆ, ಪ್ರಚಾರ ತೆಗೆದುಕೊಳ್ಳಬೇಕೆಂದು

ಇದ್ದಾರೆ, ರಾಜ್ಯಕ್ಕೆ ಒಳ್ಳೆಯ ಆಡಳಿತ ಕೊಡಬೇಕೆಂದು ಇದ್ದಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಅದರಲ್ಲಿ ತಪ್ಪೇನೂ ಇಲ್ಲ. ಇರಲಿ. ಇದನ್ನು ಒಂದು ರೀತಿಯಾಗಿ ಬಹಿರಂಗವಾಗಿ ಹೇಳದೇ ಇದ್ದರೂ ಸಹ, ನಮ್ಮ ಜೊತೆಯಲ್ಲಿ ಕಪ್ಪು ಬಾವುಟ ಹಿಡಿದಿದ್ದಂಥವರು ಇವತ್ತು ಮುಖ್ಯಮಂತ್ರಿಗಳಾಗಿದ್ದಾರೆ, ಈ ರಾಜ್ಯದ ಒಂದು ಬೆಳವಣಿಗೆ, ಉದ್ಧಾರ ಆಗುತ್ತದೆ ಎನ್ನುವ ಚಿಂತನೆ ನನಗೆ ಇತ್ತು. ಆದರೆ ನೋಡಿದರೆ ನಾನೇ ಅವರನ್ನು ಭೇಟಿ ಮಾಡುವುದಕ್ಕೆ ಆಗಲಿಲ್ಲ. ನಾನು ಶಾಸಕನಾಗಿ ಅವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದಂದಿನಿಂದ ಈ ಕ್ಷಣದವರೆಗೆ ನನಗೆ ನನ್ನ ಕ್ಷೇತ್ರದ ವಿಚಾರವನ್ನು ಹೇಳುವುದಕ್ಕೆ ಅವರು ಸಿಗಲಿಲ್ಲ. ಒಬ್ಬ ಶಾಸಕನಾಗಿ ನನ್ನ ಕ್ಷೇತ್ರದ ಅನೇಕ ಸಮಸ್ಯೆಗಳನ್ನು ಹೇಳುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಈ ಕ್ಷಣದವರೆಗೆ ಸಿಗಲಿಲ್ಲ. ಅವರು ನನ್ನನ್ನು ಕಂಡರೆ ಒಂದು ರೀತಿ ನಗುವುದು, ಜೋಕ್ ಮಾಡುವುದು ಇಷ್ಟು ಸ್ನೇಹದಲ್ಲಿ ನಡೆಯುತ್ತಿದೆಯೇ ಹೊರತು ಇನ್ನು ಏನೂ ಕೆಲಸ ಆಗಿಲ್ಲ. ಅವರು ಕುಳಿತು ಐದು ನಿಮಿಷ ಕುಳಿತು ನನ್ನ ಕ್ಷೇತ್ರದ ನೀರಿನ ಸಮಸ್ಯೆ, ರಸ್ತೆ ಸಮಸ್ಯೆ, ಹೀಗೆ ಯಾವ ವಿಚಾರವನ್ನು ಮಾತನಾಡುವುದಕ್ಕೆ ಆಗಿಲ್ಲ.

ನನಗೇ ಅವರು ಸಿಗದಿರುವಾಗ ಇನ್ನು ಜನಸಾಮಾನ್ಯರಿಗೆ ಅವರು ಎಲ್ಲಿ ಸಿಗುತ್ತಾರೆ? ಮುಖ್ಯ ಮಂತ್ರಿಗಳು ದಿನದಲ್ಲಿ 18 ಗಂಟೆ ಕಾಲ ಕೆಲಸ ಮಾಡುತ್ತಾರೆ ಎಂದು ನಮ್ಮ ಇಬ್ಬರು ಮಂತ್ರಿಗಳು ಹೇಳುತ್ತಾರೆ. ಅವರು 18 ಗಂಟೆ ಕಾಲ ಯಾವ ಕೆಲಸ ಮಾಡುತ್ತಾರೆ ಎಲ್ಲಿ ಮಾಡುತ್ತಾರೆ ಎಂಬುದಂ ನನಗಂತೂ ಗೊತ್ತಿಲ್ಲ. ಒಂದು ವೇಳೆ ಹಾಗೆ 18 ಗಂಟೆಗಳ ಕಾಲ ಕೆಲಸ ಮಾಡುವುದು ನಿಜವಾದರೆ ಅದು ನಿಜಕ್ಕೂ ಆಶ್ಚರ್ಯಕರವಾದಂಥ ಒಂದು ಕೆಲಸ, ಅದನ್ನು ಗಿನ್ನೆಸ್ ಪುಸ್ತಕದಲ್ಲಿ ಸೇರಿಸಬಹುದಾದ ವಿಚಾರ. ದಿನಕ್ಕೆ 18 ಗಂಟೆಗಳ ಕಾಲ ಕೆಲಸ ಮಾಡುವ ಏಕಮೇವ ಮುಖ್ಯಮಂತ್ರಿ ಎಂದು ಗಿನ್ನೆಸ್‌ಬುಕ್‌ನಲ್ಲಿ ಬರೆಯಬಹುದು. ಹೀಗೆ 18 ಗಂಟೆಗಳ ಕಾಲ ಕೆಲಸ ಮಾಡುವ ಈ ಮುಖ್ಯಮಂತ್ರಿಯವರಿಗೆ ನನ್ನಂತಹ ಶಾಸಕನಿಗೆ ಐದು ನಿಮಿಷ ಕಾಲ ಕಾಲಾವಕಾಶವನ್ನು ಕೊಡುವುದಕ್ಕೆ ಆಗಲಿಲ್ಲ ಎಂದರೆ ಹಣೆಬರಹ ನನ್ನದೇ ಸರಿಯಿಲ್ಲವೋ ಅಥವಾ ನನಗೆ ಸಿಗದೇ ತಮಗೆಲ್ಲರಿಗೂ ಸಿಕ್ಕಿದೆಯೋ ನನಗಂತೂ ಗೊತ್ತಿಲ್ಲ. ಇಲ್ಲಿ ನಾನು ಯಾವ ಪಕ್ಷ, ಪಂಗಡಗಳನ್ನು ಕುರಿತು ಮಾತನಾಡುತ್ತಾ ಇಲ್ಲ. ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಇಲ್ಲಿ ಮಾತನಾಡುತ್ತಾ ಇಲ್ಲ. ಇನ್ನು ಈ ಶಾಸನ ಸಭೆಯ ಕಾಲಾವಧಿ ಎಷ್ಟು ವರ್ಷಗಳು ಎಂಬುದು ಕೂಡ ನನಗೆ ಗೊತ್ತಿಲ್ಲ.

ಹಿಂದಿನ ಮುಖ್ಯಮಂತ್ರಿಯವರು ಇದ್ದಾಗ ಒಂದು ವರ್ಷದಲ್ಲಿ ನಾನು ಕನಿಷ 20 ಸಾರಿ ಅವರನ್ನು ಭೇಟಿ ಮಾಡಿ ಮಾತನಾಡಿದ್ದೇನೆ. ಅವರಲ್ಲಿ ಹೋದ ತತ್‌ಕ್ಷಣವೇ ನಮಗೆ ಅವಕಾಶ ಸಿಗುತ್ತಿತ್ತು. ನಿನ್ನೆ ಮಾನ್ಯ ಸಿಂಧ್ಯರವರು ಕೂಡ ಇದ್ದರು. ಅವರೇ ಸಾಕ್ಷಿಯಾಗಿದ್ದಾರೆ, ನಿನ್ನೆ ನಾನು ಇಲ್ಲೇ ಕೇಳಿದೆ. ನಮಗೆ ಕಾಲಾವಕೊಡಿ ನಾವು ನಿಮ್ಮ ಹತ್ತಿರ ಮಾತನಾಡಬೇಕಾಗಿದೆ ಎಂದು ಕೇಳಿದೆ. ನಾಳೆ ಬನ್ನಿ ಎಂದು ಹೇಳಿದರು. ನಾಳೆ ಎಂದರೆ ಎಲ್ಲಿಗೆ ಹೋಗುವುದು? ಕರೆದವರು ಯಾರು, ಎಲ್ಲಿ ಕುಳಿತುಕೊಳ್ಳುವುದು ಮತ್ತು ಯಾವಾಗ ಹೋಗುವುದು ಎಂಬ ಪ್ರಶ್ನೆ ಬರುತ್ತದೆ. ಅಂತೂ ಪ್ರಶ್ನೋತ್ತರ ಮತ್ತು ಶೂನ್ಯವೇಳೆ ಮುಗಿದ ನಂತರ ವಾಟಾಳ್ ನಾಗರಾಜ್‌ರನ್ನು ಕರೆಯಿರಿ ಎಂದು ಹೇಳಿದರು. ನಾನು ನಿನ್ನೆಯಿಂದ ಈ ಕ್ಷಣದವರೆಗೆ ಜಾತಕಪಕ್ಷಿ ಕಾದ ಹಾಗೆ ಕಾದು ಕುಳಿತಿದ್ದೆ. ಆದರೂ ಸಿಗಲಿಲ್ಲ.

ಹೀಗೆ ಮೂರು ತಿಂಗಳುಗಳಿಂದ ಪ್ರಯತ್ನಿಸಿದ್ದೇನೆ. ಇದೇನೂ ಹೊಸತಲ್ಲ. ನಾನು ಅದರ ಬಗ್ಗೆ ಯೋಚನೆ ಮಾಡಬೇಕಾಗಿಲ್ಲ. ಬಹಳ ಜನರು ಮಾನ್ಯ ಮುಖ್ಯ

ಮಂತ್ರಿಗಳ ಹಿಂದೆ ಮುಂದೆ ಬಾಲ ಹಿಡಿದುಕೊಂಡು ಏನಾದರೂ ಒಂದು ಅವಕಾಶ ಸಿಕ್ಕೀತು ಎಂದು ತಿರುಗಾಡುತ್ತಿದ್ದಾರೆ. ಮಂಡಳಿಯ ಅಧ್ಯಕ್ಷಗಿರಿ ಅಥವಾ ಇನ್ನಾವುದೋ ಒಂದು ಪದವಿ ಸಿಕ್ಕೀತು ಎಂದು ಅವರುಗಳು ರಾತ್ರಿ ಹಗಲೂ ಮುಖ್ಯಮಂತ್ರಿಯವರ ಹಿಂದಿದ್ದರು. ಆದರೆ ಇವೊತ್ತಿನ ಪತ್ರಿಕೆಗಳಲ್ಲಿ ಕೇಂದ್ರದ ಆದೇಶವನ್ನು ನೋಡಿದ ನಂತರ ಅವರಿಗೆಲ್ಲ ಒಂದು ರೀತಿಯಲ್ಲಿ ತರ್ಪಣ ಬಿಟಹಾಗೆ ಆಗಿದೆ. ಇನ್ನು ಚುನಾವಣೆ ಮುಗಿದ ನಂತರ ಅವರ ಸರ್ಕಾರ ಉಳಿದ ಬಳಿಕ ಇವರಿಗೆ ಮಂಡಳಿಗಳು, ಈ ಕುರ್ಚಿಗಳು ಗೂಟದ ಕಾರು, ಭವ್ಯಬಂಗಲೆ ಇವೆಲ್ಲಾ ಸಿಗುತ್ತದೆ. ಗೂಟದ ಕಾರು ಅಂದರೆ ಬಾವುಟದ ಕಾರು. ಮಂತ್ರಿಯಾದರೆ ಇವೆಲ್ಲಾ ಸವಲತ್ತುಗಳ ಜೊತೆಗೆ ಬಂದೂಕು ಧಾರಿ ಕಾವಲು ಪಡೆಯೂ ಇರುತ್ತದೆ. ಹೀಗೆ ಕಾದಿದ್ದವರಿಗೆ ಆ ಭಾಗ್ಯ ಯಾವಾಗ ಬರುತ್ತದೋ ನನಗಂತೂ ಗೊತ್ತಿಲ್ಲ. ಈಗ ಅದಕ್ಕೆಲ್ಲ ಒಂದು ರೀತಿ ತರ್ಪಣ ಬಿಟ್ಟ ಹಾಗೆ ಆಗಿದೆ.

ಇನ್ನು ಮಾನ್ಯ ರಾಜ್ಯಪಾಲರು ಪಂಚಸೂತ್ರದ ವಿಚಾರ ಹೇಳಿದ್ದಾರೆ. ಪಂಚಸೂತ್ರದ ಹೆಸರು ಚೆನ್ನಾಗಿ ಇದೆ. ಆದರೆ ನನಗೆ ಇದರ ಅರ್ಥವಾಗುತ್ತಾ ಇಲ್ಲ. ಇದರಲ್ಲಿನ ಮೊದಲನೇ ಸೂತ್ರವನ್ನು ನಿನ್ನೆಯಿಂದ ಓದುತ್ತಾ ಇದ್ದೇನೆ, ಆದರೂ ಅರ್ಥವಾಗಿಲ್ಲ, ಎರಡನೆ ಸೂತ್ರವನ್ನು ಮೊನ್ನೆಯಿಂದ ಓದುತ್ತಾ ಇದ್ದೇನೆ, ಅದು ಕೂಡ ಇನ್ನೂ ಅರ್ಥ ಮಾಡಿಕೊಳ್ಳಲು ಆಗಿಲ್ಲ. ಇವತ್ತೆಲ್ಲ ಕುಳಿತುಕೊಂಡು ಇನ್ನು ಮೂರು ಸೂತ್ರಗಳನ್ನು ಓದುತ್ತಿದ್ದೇನೆ. ಆದರೂ ಕೂಡ ಅದರ ಅರ್ಥವೇ ತಿಳಿಯುತ್ತಿಲ್ಲ. ಹಾಗಿದ್ದರೆ ಇದು ಯಾವ ಸೂತ್ರ? ನನಗನ್ನಿಸುತ್ತದೆ ಇದು ಪಂಚಸೂತ್ರವಲ್ಲ, ಇದೊಂದು ರೀತಿಯಲ್ಲಿ ಶವಸಂಸ್ಕಾರದ ಮೆರವಣಿಗೆ. ಶವಸಂಸ್ಕಾರಕ್ಕೆ ಹೋಗುವಾಗ ಒಂದು ಶವವನ್ನು ಮೆರವಣಿಗೆ ತೆಗೆದುಕೊಂಡು ಹೋಗುತ್ತಾರೆ. ನಾಲ್ಕು ಜನರು ಅದನ್ನು ಹೊತ್ತಿರುತ್ತಾರೆ ಒಬ್ಬರು ಹಿಡಿದುಕೊಂಡಿರುತ್ತಾರೆ, ಇದೇ ಪಂಚಸೂತ್ರವಾಗಿರಬೇಕು ಇದು ಯಾವ ಸೂತ್ರ, ಇದು ಪಂಚಸೂತ್ರ. ಈ ರಾಜ್ಯದ ಜನರು ನಿಮ್ಮ ಮೇಲೆ ಯಾವ ನಂಬಿಕೆ, ವಿಶ್ವಾಸವನ್ನು ಇಟ್ಟಿದ್ದಾರೋ, ಅಭಿಮಾನವನ್ನು ಇಟುಕೊಂಡಿದ್ದರೋ ಅದು ಹೆಣದ ರೂಪದಲ್ಲಿ ಹೋಗುತ್ತಿದೆ. ಇದೇ ಪಂಚಸೂತ್ರ ನಿಮ್ಮದು ಇರಬೇಕು.

ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ : ನಿಮ್ಮ ಮಟದಲ್ಲಿ ಬಹುಶ: ಆ ಚಿಂತನೆಯನ್ನು ಮಾಡುತ್ತಿದ್ದೀರಿ ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಹೌದು ತಾವು ಮಹಾ ಪಂಡಿತರು, ಮೇಧಾವಿಗಳು. ನನ್ನ ಮಟ್ಟ ಏನು ಎಂಬುದು ಇಡೀ ದೇಶಕ್ಕೆ ಗೊತ್ತಿದೆ. ನಾನು ಹೇಳುತ್ತಿರುವುದು, ಈ ಆಡಳಿತದ ಶವಸಂಸ್ಕಾರದ ಮೆರವಣಿಗೆ ನಡೆಯುತ್ತಾ ಇದೆ. ಅದರ ಹಿಂದೆ ಲಬೊ ಲಬೊ ಎಂದು 15 ಜನ ಇದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಲಬೊ ಲಬೊ ಎಂಬ ಪದವನ್ನು ಬಳಸಬಾರದು. ಗೊಂದಲ

ಶ್ರೀ ವಾಟಾಳ್ ನಾಗರಾಜ್ : ಇನ್ನು ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ನಾವು ಈ ಬಗ್ಗೆ 20 ವರ್ಷಗಳಿಂದ ಸಮಗ್ರವಾಗಿ ನಿರೀಕ್ಷಣೆ ಮಾಡಿಕೊಂಡು ಬಂದಿದ್ದೇವೆ. 1972ನೇ ಇಸವಿಯಲ್ಲಿ ಅಂದಿನ ಪ್ರಧಾನಿಯವರಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ಅದಕ್ಕೆ ಅಡಿಗಲ್ಲು ಹಾಕಿದರು. ಅಂದು ರಾಜ್ಯದ ಮುಖ್ಯ ಮಂತ್ರಿಯವರಾಗಿದ್ದಂಥ ಶ್ರೀ ವೀರೇಂದ್ರ ಪಾಟೀಲ್‌ರವರು ಉಪಸ್ಥಿತರಿದ್ದರು. ಅಂದು ನಾವೆಲ್ಲರೂ ಒಂದು ಭವ್ಯ ಕನಸನ್ನು ಕಂಡಿದ್ದೆವು. ಹಂಪೆ ವಿಜಯನಗರ ಸಾಮ್ರಾಜ್ಯದ ಒಂದು ಸ್ಥಳ. ಇದರಲ್ಲಿ ಕನ್ನಡಿಗರ ಸಾಮ್ರಾಜ್ಯವು ಈ ಕಾರ್ಖಾನೆಯ ಮೂಲಕ ನಿರ್ಮಾಣವಾಗಬಹುದೆಂದು ತಿಳಿದಿದ್ದೆವು. ಅದೆಲ್ಲಾ ಬಿಟು

ಇವೊತ್ತು ವಿಜಯನಗರ ಉಕ್ಕು ಕಾರ್ಖಾನೆಯ ಬಗ್ಗೆ ಒಂದು ಒಪ್ಪಂದ ಆಯಿತು. ಎಸ್ಸಾರ್ ಕಂಪೆನಿ ಜೊತೆಗೆ ರಾಜ್ಯ ಸರ್ಕಾರದವರು ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ. ಎಸ್ಸಾರ್ ಕಂಪೆನಿಯವರು ಆ ಕಂಪೆನಿಯನ್ನು ನಡೆಸತಕ್ಕ ಬಗ್ಗೆ ಒಪ್ಪಂದವಾಗಿದೆ. ಈ ಎಸ್ಸಾರ್ ಕಂಪೆನಿಯವರು ಯಾರು? ಇವರು ಹೊರ ರಾಜ್ಯದವರು.

ಈ ಒಪ್ಪಂದದ ಕರಾರಿನ ಪ್ರತಿಯೊಂದು ವಿಷಯವನ್ನು ಈ ಸದನದ ಮುಂದೆ ಮಂಡಿಸಬೇಕು. ನಾನು ಹೇಳುತ್ತೇನೆ, ಈ ಕರಾರಿನ ಹಿಂದೆ ಭಾರಿ ದೊಡ್ಡ ಮೋಸ ನಡೆದಿದೆ. ಈ ಕರಾರಿನ ಹಿಂದೆ ಭಾರಿ ದೊಡ್ಡ ಅನ್ಯಾಯ ನಡೆದಿದೆ. ಈ ಕಾರ್ಖಾನೆಯನ್ನು ಬೇರೆ ರಾಜ್ಯದವರಿಗೆ ಮಾರುವುದರಲ್ಲಿ ಕೊಡುವುದರಲ್ಲಿ ಭಾರಿ ಗೋಲ್‌ಮಾಲ್ ನಡೆದಿದೆ. ಈ ಬಗ್ಗೆ ಇರುವ ಎಲ್ಲಾ ವಿವರಗಳನ್ನು ಸರಕಾರದವರು ಸಭೆಯ ಮುಂದೆ ಇಡಬೇಕು. ಪ್ರತಿಯೊಂದು ಕರಾರನ್ನು ಮಂಡಿಸಬೇಕು ಮತ್ತು ಕಾರ್ಖಾನೆಯನ್ನು ಯಾವ ಕಾರಣಕ್ಕಾಗಿ, ಯಾವ ರೀತಿ ಕೊಟ್ಟಿದ್ದೀರಿ ಎನ್ನುವ ವಿವರಗಳನ್ನು ಸಭೆಯ ಮುಂದೆ ಮಂಡಿಸಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ : ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ವಿಜಯನಗರ ಕಾರ್ಖಾನೆಯ ಒಪ್ಪಂದ ವಿಚಾರದಲ್ಲಿ ದೊಡ್ಡ ಒಂದು ಗೋಲ್‌ಮಾಲ್ ನಡೆದಿದೆ ಎಂದು ಮಾನ್ಯ ಸದಸ್ಯರು ಗಂಭೀರವಾಗಿ ಆರೋಪಿಸಿದ್ದಾರೆ. ಅವರು ಮಾಡಿರತಕ್ಕಂಥ ಆರೋಪವನ್ನು ಸಾಬೀತು ಮಾಡಬೇಕು. ಅದಕ್ಕೋಸ್ಕರ ನನ್ನ ಕ್ರಿಯಾಲೋಪವಿದೆ. ಏಕೆಂದರೆ, ಸಾರಾಸಗಟಾಗಿ ಹೀಗೆ ಆರೋಪ ಮಾಡುವುದು ಸಾಧ್ಯವೆ? ಗೋಲ್‌ಮಾಲ್ ಎಲ್ಲಿ ಮತ್ತು ಹೇಗೆ ನಡೆದಿದೆ ಎಂಬುದನ್ನು ಅವರು ಹೇಳಲಿ.

ಶ್ರೀ ವಾಟಾಳ್ ನಾಗರಾಜ್ : ಗೋಲ್‌ಮಾಲ್ ಎಲ್ಲಿ ನಡೆದಿದೆ ಮತ್ತು ಹೇಗೆ ನಡೆದಿದೆ ಎಂಬುದನ್ನು ನನಗೂ ಮತ್ತು ಶಿವರಾಮೇಗೌಡರಿಗೂ ಗೊತ್ತು.

ಶ್ರೀ ಕೆ. ಸೋಮಪ್ಪ ಸುವರ್ಣ : ನಮ್ಮ ರಾಜ್ಯದಲ್ಲಿ ನಾವು ಕರ್ನಾಟಕದವರು ಮಾತ್ರ ಇರಬೇಕು ಬೇರೆಯವರು ಇರಬಾರದು ಎಂದು ಹೇಳುವುದು ಸರಿಯಲ್ಲ. ಇಲ್ಲಿಗೆ ಹೊರಗಿನವರು ಬರಬಾರದು ಎಂದು ಹೇಳುವುದು ಸರಿಯಲ್ಲ. ಇದು ಸಂಕುಚಿತ ಭಾವನೆಯಾಗುತ್ತದೆ. ಇದರಿಂದ ನಮ್ಮ ಕರ್ನಾಟಕದ ಏಳಿಗೆಯನ್ನು ಸಾಧಿಸುವುದಕ್ಕೆ ಆಗುವುದಿಲ್ಲ. ನಾವು ದಕ್ಷಿಣ ಕನ್ನಡದವರು ಜಗತ್ತಿನ ಮೂಲೆ ಮೂಲೆಗೆ ಹೋಗಿ ದುಡಿದು ಗಳಿಸಿದ ಹಣವನ್ನು ತಂದು ರಾಜ್ಯದಲ್ಲಿ ತೊಡಗಿಸಿ ಎನ್‌ಆರ್‌ಐ ಅಕೌಂಟ್ ಮಾಡಿ ರಾಜ್ಯದ ಸಂಪತ್ತನ್ನು ಹೆಚ್ಚಿಸಿದ್ದೇವೆ. ಹಾಗಾದರೆ ಹೊರಗೆ ಹೋಗುವುದು ಬೇಡವೆ? ನಾವು ಇಲ್ಲಿ ಹೀಗೆ ಹೇಳಿದರೆ ಅಲ್ಲಿ ನಮಗೆ ಅವರು ಇರಗೊಡುತ್ತಾರೆಯೆ? ನಾವುಗಳು ಈ ದೇಶದ ಒಂದು ಶಕ್ತಿಯನ್ನು ಉಳಿಸಿದ್ದೇವೆ. ನಿಮ್ಮ ಈ ಮಾತುಗಳು ಸರಿಯಲ್ಲ. ದೇಶದಲ್ಲಿನ ಜನರು ಎಲ್ಲಿಗೆ ಬೇಕಾದರೂ ಹೋಗಬಹುದು. ಇಂಥ ಭಾವನೆಯು ನಮ್ಮ ಕರ್ನಾಟಕದ ಹಿತವನ್ನು ಕಾಪಾಡುವುದಿಲ್ಲ, ಹಾಳು ಮಾಡುತ್ತದೆ. ನಿಮ್ಮ ಧೋರಣೆಯು ನಾಚಿಕೆಪಡುವಂಥ ಧೋರಣೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ತಾವುಗಳು ಹೇಳಿ. ನಾನೇನು ನಿಮ್ಮ ಮೇಲೆ ಬೀಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಶಿವರಾಮೇಗೌಡರು, ವಿಜಯನಗರದ ಉಕ್ಕಿನ ಕಾರ್ಖಾನೆ ಬಗ್ಗೆ ಮಾಡಿದ ಆರೋಪವನ್ನು ವಾಟಾಳ್‌ರವರು ಸಾಬೀತು ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಹಾಗಾದರೆ ಅದನ್ನು ಎಲ್ಲಿ ಮತ್ತು ಹೇಗೆ ಸಾಬೀತು ಮಾಡಬೇಕೆಂದು ಅವರೇ ಹೇಳಲಿ. ಅದಕ್ಕೆ ಸಂಬಂಧಪಟ ಕಡತವನ್ನು ಸದನದಲ್ಲಿ ಇಡಿ. ನಾನು ಆ ಮೇಲೆ ಉತ್ತರಿಸುವುದಕ್ಕೆ ಯೋಚನೆ ಮಾಡುತ್ತೇನೆ. ಕರ್ನಾಟಕದವರು ಯಾರ್ಯಾರು

ಅರ್ಜಿ ಹಾಕಿದ್ದಾರೆ, ಹೊರಗಿನವರು ಯಾರ್ಯಾರು ಅರ್ಜಿ ಹಾಕಿದ್ದಾರೆ, ಎಷ್ಟು ಟೆಂಡರ್ ಅವರು ಹಾಕಿದ್ದರು ಮತ್ತು ಹೇಗೆ, ಯಾರು ಸಹಿಮೂಡಿದ್ದದು ಮತ್ತು ಯಾವ ಮನೆಯಲ್ಲಿ ಕುಳಿತುಕೊಂಡರೆ ಮಾತನಾಡಿದರು, ಒಳಗೆ ಏನೇನು ನಡೆಯಿತು ಎಂದೆಲ್ಲಾ ಹೇಳುತ್ತೇನೆ. ಎಲ್ಲಿ ಯಾವ ರೀತಿಯ ವ್ಯಾಪಾರ ನಡೆದಿದೆ ಎಂಬುದನ್ನು ನಾನು ಹೇಳುತ್ತೇನೆ.

ಅದರಲ್ಲಿ ಏನೂ ಬೇರೆ ಮಾತಿಲ್ಲ. ಹಿಂದೆ ಮುಂದೆ ಏನು ಹೇಳುವುದಿದೆ, ನನಗೂ ಸ್ವಲ್ಪ ಅಭಿಮಾನ ಇದೆ, ಆಸ್ಥೆ ಇದೆ, ಕರ್ನಾಟಕ ರಾಜ್ಯದಲ್ಲಿ ಕರ್ನಾಟಕದವರಿಗೆ ಕಾರ್ಖಾನೆಗಳು ಇರಬೇಕು ಎಂದು ಆಸ್ಥೆ ಇದೆ. ನೂರಕ್ಕೆ 90 ಭಾಗ ಕಾರ್ಖಾನೆಗಳು ಇವತ್ತು ಹೊರಗಡೆಯವರದು. ರಾಜಸ್ಥಾನದವರಿಗೆ, ಮುಸ್ತಾನಿಗಳಿಗೆ, ಮಾರ್ವಾಡಿಗಳಿಗೆ, ಗುಜರಾತಿಗಳಿಗೆ ನಮ್ಮ ಕರ್ನಾಟಕದ ನೆಲವನ್ನು, ನಮ್ಮ ಹಣವನ್ನು ಏತಕ್ಕೆ ಕೊಡಬೇಕು. ನಮ್ಮ ಸಂಪತ್ತು ಇದನ್ನೆಲ್ಲಾ ಯಾರಿಗೋಸ್ಕರ ಮಾಡುತ್ತಿದ್ದೇವೆ? ಈಗ ಮಾನ್ಯ ಸ್ನೇಹಿತರು ಯಾವ ಭಾಷೆಯವರು ಬೇಕಾದರೂ ಬರಲಿ, ಯಾರು ಬೇಕಾದರೂ ಬರಲಿ ಎಂದು ಹೇಳಿದರು. ಇದಕ್ಕಿಂತ ನಿರಭಿಮಾನ, ಇದಕ್ಕಿಂತ ದೌರಭಿಮಾನ ಮತ್ತೊಂದು ಇಲ್ಲ. ಯಾವುದೇ ಸರ್ಕಾರವಾಗಲಿ, ಬೇರೆ ಯಾವ ಯಾವ ರಾಜ್ಯದಲ್ಲಿ ಕರ್ನಾಟಕದ ಕೈಗಾರಿಕೋದ್ಯಮಿಗಳಿಗೆ ಎಷ್ಟು ಬೆಂಬಲವನ್ನು ಕೊಟಿದ್ದಾರೆ ಎಂಬ ಬಗ್ಗೆ ಸಭೆಯ ಮುಂದೆ ಒಂದು ಶ್ವೇತಪತ್ರವನ್ನು ಸರ್ಕಾರ ಹೊರಡಿಸಲಿ. ನಾನು ಹೇಳುತ್ತೇನೆ, ಇಡೀ ಕರ್ನಾಟಕದ ಉದ್ದಗಲಕ್ಕೂ ಪ್ರತಿಯೊಂದು ಕಡೆ ಸುಮಾರು 80 ಭಾಗ ನಿಸರ್ಗ ಸಂಪತ್ತು ಸಮಗ್ರವಾಗಿ ನೆರೆ ರಾಜ್ಯದವರಿಗೆ ಆಗಿದೆಯೇ ಹೊರತು ನಮಗೇನೂ ಇಲ್ಲ. ತಮಗೆ ನಾನು ಹೇಳುತ್ತೇನೆ, ಇದು ನನ್ನ ತಾಲ್ಲೂಕು ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಬರುತ್ತದೆ. ಬಣ್ಣಾರಿಯಮ್ಮ ಎಂಬ ಒಂದು ಸಕ್ಕರೆ ಕಾರ್ಖಾನೆ ಈಗ ಅಲ್ಲಿಗೆ ಬರುತ್ತದೆ. ಬಣ್ಣಾರಿಯಮ್ಮ ಕಾರ್ಖಾನೆ ಅದು ತಮಿಳು ನಾಡಿನದು. ಈ ಪ್ರಕಾರ ಕಾರ್ಖಾನೆಗಳು, ಕರ್ನಾಟಕದ ಮೂಲೆ ಮೂಲೆಯಲ್ಲಿ ಏನಿವೆ ಅಲ್ಲಿ ಹೊರಗಡೆ ರಾಜ್ಯದವರೇ ಇದ್ದಾರೆ.

ಇದನ್ನು ತಪ್ಪಿಸುವುದಕ್ಕೆ ಸರ್ಕಾರದಲ್ಲಿ ಒಂದು ಸಮಗ್ರವಾದ್ದಂಥ ಕೈಗಾರಿಕಾ ನೀತಿ ಇಲ್ಲ. ಒಂದು ಸಮಗ್ರವಾದಂಥ ಕೈಗಾರಿಕಾ ನೀತಿ ಇದ್ದಿದ್ದರೆ ಇವತ್ತು ಅದರ ಪರಿಸ್ಥಿತಿಯೇ ಬೇರೆಯಾಗುತ್ತಿತ್ತು. ಆದುದರಿಂದ ಇಂಥ ವಿಜಯನಗರ ಉಕ್ಕು ಕಾರ್ಖಾನೆಯಂಥ ಒಂದು ಇತಿಹಾಸ ಪ್ರಸಿದ್ಧವಾದಂಥ ಕಾರ್ಖಾನೆ ಬರುವಾಗ ಸರ್ಕಾರ ಸ್ವಲ್ಪ ದಾರಿ ತಪ್ಪಿದೆ. ಸರ್ಕಾರ ಸ್ವಲ್ಪ ಅತ್ತ ಇತ್ತ ಎಡವಿದೆ. ಅದರಲ್ಲಿ ಏನೂ ಅನುಮಾನ ಇಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಇನ್ನು ಸರ್ಕಾರದ ನೀತಿ ವರ್ಗಾವರ್ಗೀಯ ಬಗ್ಗೆ ಹೇಳುವುದಾದರೆ, ಈ ಸರ್ಕಾರದಲ್ಲಿ ತಾವು ಯಾರು ಬೇಕಾದರೂ ವರ್ಗ ಮಾಡಬಹುದು, ನನ್ನದೇನೂ ಇದರಲ್ಲಿ ಇಲ್ಲ. ನಿಮ್ಮ ಸರ್ಕಾರ ಇದೆ, ತಾವು ಯಾವಾಗ, ಯಾರನ್ನು ಬೇಕಾದರೂ ವರ್ಗ ಮಾಡಬಹುದು. ಸಾರ್ವಜನಿಕ ಹಿತದೃಷ್ಟಿಯಿಂದ,ಸರ್ಕಾರದ ಹಿತದೃಷ್ಟಿಯಿಂದ ಮಾಡಬಹುದು. ಯಾವ ಸಂದರ್ಭದಲ್ಲಿ ಅದನ್ನು ಮಾಡಬೇಕು? ಏನು ನಿಮಗೆ ಜ್ಞಾನ ಬಂದಾಗಲೆಲ್ಲಾ ಮಾಡಬಹುದು ಎಂತಲೇ ನಿಮಗೆ ಯಾರು ಬಂದು ಅರ್ಜಿಯನ್ನು ಕೊಡುತ್ತಾರೆ, ಯಾರು ಬಂದು ಕಿವಿಯಲ್ಲಿ ತುತ್ತೂರಿಯನ್ನು ಊದುತ್ತಾರೆ, ಅವರಿಗೆಲ್ಲಾ ತಕ್ಷಣ ಇವರನ್ನು ಅಲ್ಲಿಗೆ ಅವರನ್ನುಇಲ್ಲಿಗೆ, ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಎತ್ತಿ ಹಾಕತಕ್ಕಂಥದ್ದು. ಇದೇನು ಚೆಸ್ ಆಟವೇ?

ಕರ್ನಾಟಕ ಸರ್ಕಾರದಲ್ಲಿ ಇವತ್ತು ಅಧಿಕಾರ ವರ್ಗದಲ್ಲಿ ಒಂದು ರೀತಿಯ ಕ್ಷೋಭೆ ಪ್ರಾರಂಭವಾಗಿದೆ. ಅಧಿಕಾರಿಗಳಿಗೆ ಭದ್ರತೆ ಇಲ್ಲ. ಅಧಿಕಾರಿಗಳು ನಡುಗಿದ್ದಾರೆ, ಅಧಿಕಾರಿಗಳು ಹೆದರಿದ್ದಾರೆ. ಸರ್ಕಾರ ಬದಲಾವಣೆಯಾದಂತೆ ನಾವು ರಾಜಕಾರಣಿಗಳು,

ಸರ್ಕಾರ ನಡೆಸುವವರು ಅಧಿಕಾರಿಗಳನ್ನು ಉಪಯೋಗಿಸಿಕೊಂಡಿದ್ದೇವೆ. ಅಧಿಕಾರ ಹೋದ ನಂತರ ಆ ಅಧಿಕಾರಿಗಳನ್ನು ತೆಗೆದು ಬೇರೆ ಕಡೆಗೆ ಹಾಕುವುದು, ಬೇರೆ ಅಧಿಕಾರಿಗಳನ್ನು ತರತಕ್ಕಂಥದ್ದು - ಈ ಪರಿಸ್ಥಿತಿಯಲ್ಲಿ ವರ್ಗಾವರ್ಗಿ ನಡೆದಿದೆಯೆಲ್ಲಾ, ಈ ಸರ್ಕಾರದ ನೀತಿ ಸಮಗ್ರವಾಗಿ ಬದಲಾವಣೆಯಾಗಬೇಕು. ಈ ಹಿಂದೆ ಶ್ರೀಮಾನ್ ಗುಂಡೂರಾಯರು ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿದ್ದರು. ಆಗ ವರ್ಗಾವಣೆ ಬಗ್ಗೆ ಒಂದು ನೀತಿ ಇತ್ತು. ಒಂದು ಸಾರಿ ವರ್ಗಾವಣೆಯಾದರೆ ಮೂರು ವರ್ಷ ಅಲ್ಲಿ ಅಧಿಕಾರಿಗಳಿರುತ್ತಿದ್ದರು. ನಾನೇ ಕಣ್ಣಾರೆ ಕಂಡಂತೆ, ಅವರ ತಂದೆ ಕಡೆಯಿಂದ ಒಬ್ಬರು ಬಂದು ಬದಲಾವಣೆ ಮಾಡಿಸಬೇಕು ಎಂದು ಹೇಳಿದರು, ಆದರೂ ಮಾಡಲಿಲ್ಲ. ಆಗ ತಾವು ಕೂಡಾ ಇದ್ದೀರಿ. ಆಗ ಅಧಿಕಾರಿಗಳಿಗೆ ಒಂದು ಧೈರ್ಯ ಇತ್ತು. ಒಂದು ಕಡೆಯಿಂದ ಮತ್ತೊಂದು ಕಡೆಗೆ ನಾವು ಹೋದರೆ ಮೂರು ವರ್ಷ ಯಾರೂ ನಮ್ಮನ್ನು ಬದಲಾವಣೆ ಮಾಡುವುದಿಲ್ಲ. ಆದುದರಿಂದ ನಾವು ಸಮಗ್ರವಾಗಿ ಯಾವುದೇ ಚಿಂತೆ ಇಲ್ಲದೆ ಇರಬಹುದು ಎನ್ನುವ ಭಾವನೆ ಅಧಿಕಾರಿಗಳಲ್ಲಿತ್ತು.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುವ ಮಾತನ್ನು ನಾನು ವಿರೋಧ ಮಾಡುತ್ತೇನೆ. ಯಾರು ಸರಿಯಾಗಿ ಸರ್ಕಾರದಲ್ಲಿ ಕೆಲಸ ಮಾಡುವುದಿಲ್ಲ, ಅಂಥವರನ್ನು ವರ್ಗಾವಣೆ ಮಾಡಬೇಕಾಗುತ್ತದೆ. ಆ ರೀತಿ ಮಾಡುವುದು ಸರಿ.

ಶ್ರೀ ವಾಟಾಳ್ ನಾಗರಾಜ್: ನಾನು ಒಂದು ವಿಚಾರವನ್ನು ಹೇಳುತ್ತೇನೆ. ನಾನು ಸಾರಾಸಗಟಾಗಿ ಭ್ರಷ್ಟಾಚಾರ ಮಾಡಿರತಕ್ಕಂಥ ಅಧಿಕಾರಿಗಳನ್ನೆಲ್ಲಾ ಅಲ್ಲಿಯೇ ಇಟ್ಟುಕೊಳ್ಳಿ ಎಂದು ಹೇಳಲಿಲ್ಲ, ನೀವು ಇತ್ತೀಚೆಗೆ ಬದಲಾವಣೆ ಮಾಡಿದ್ದೀರಲ್ಲಾ, ಅವರೆಲ್ಲರೂ ಹರಿಶ್ಚಂದ್ರನ ಮೊಮ್ಮಕ್ಕಳು. ಈಗ ನೀವು ಅಧಿಕಾರಿಗಳನ್ನು ತೆಗೆದಕೊಂಡಿದ್ದೀರಲ್ಲಾ ಅಂದರೆ, ಇತ್ತೀಚಿನ ಮೂರು ತಿಂಗಳಲ್ಲಿ ನೀವು ಬದಲಾವಣೆ ಮಾಡಿದ್ದೀರಲ್ಲಾ, ಅವರೆಲ್ಲರೂ ಹರಿಶ್ಚಂದ್ರನ ಪಕ್ಕದಲ್ಲಿ ಇದ್ದವರು. ಹರಿಶ್ಚಂದ್ರನ ಪಕ್ಕದಲ್ಲಿಯೇ ಇದ್ದರು. ಅಲ್ಲಿಂದ ನೀವು ಅವರನ್ನು ತೆಗೆದುಕೊಂಡಿರುವುದು. ಆದುದರಿಂದ ಅವರೆಲ್ಲರೂ ಬಹಳ ಭ್ರಷ್ಟರೇನೂ ಅಲ್ಲ, ಪ್ರಪಂಚಕ್ಕೂ ಏನೂ ಮಾಡಿರತಕ್ಕಂಥವರೂ ಅಲ್ಲ, ನಾನು ಅದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ, ಈಗ ಮುಖ್ಯ ಕಾರ್ಯದರ್ಶಿಗಳ ಬಗ್ಗೆ ಹೇಳುವುದಾದರೆ, ಮುಖ್ಯ ಕಾರ್ಯದರ್ಶಿಗಳ ಒಂದು ಹುದ್ದೆ ಇಡೀ ರಾಜ್ಯದಲ್ಲಿಯೆ ಉನ್ನತವಾದಂಥ ಸ್ಥಾಪನವನ್ನು ಪಡೆದಿರತಕ್ಕಂಥದ್ದು. ಆ ಹುದ್ದೆಯಲ್ಲಿದ್ದವರನ್ನು ಬದಲಾವಣೆ ಮಾಡಿರುವುದು ಸರಿ ಇಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಒಂದು ಬದಲಾವಣೆಯ ಮಾರ್ಗ ಇದೆಯಲ್ಲಾ, ನೀವು ಬದಲಾವಣೆಗಳಲ್ಲಿ ತುಳಿದಂಥ ಮಾರ್ಗ ಇದೆಯಲ್ಲ ಈ ಮಾರ್ಗ ಸರಿ ಇಲ್ಲ, ಬಹಳ ಗಂಭೀರವಾಗಿ, ಬುದ್ಧಿವಂತಿಕೆಯಿಂದ ನೀವು ಇದನ್ನು ಮಾಡಬಹುದಾಗಿತ್ತು.

ಈ ಕರ್ನಾಟಕ ರಾಜ್ಯ ಹುಟ್ಟಿದ ಇತಿಹಾಸದಲ್ಲಿ, ಹಿಂದೆ ಇದ್ದಂಥ ಕೆ.ಸಿ. ರೆಡ್ಡಿಯವರ ಕಾಲದಿಂದ ಬಂಗಾರಪ್ಪನರವ ಕಾಲದವರೆಗೂ ಈ ರೀತಿಯಾಗಿ ಮುಖ್ಯ ಕಾರ್ಯದರ್ಶಿಗೂ ಬದಲಾವಣೆ ನಡೆದಿದೆಯೆಲ್ಲಾ, ಈ ನೀತಿ ಇದೆಯಲ್ಲಾ, ನನಗೇನೂ ಇದರಲ್ಲಿ ಭಿನ್ನಾಭಿಪ್ರಾಯ ಇಲ್ಲ, ಶಂಕರ್‌ನಾರಾಯಣ ಇರಬಹುದು, ಅಥವಾ ಇನ್ನೊಬ್ಬ ಮುಖ್ಯಕಾರ್ಯದರ್ಶಿಗಳು ಬರಬಹುದು. ಆದರೆ ಈ ಬದಲಾವಣೆಯ ರೀತಿ ಇದೆಯಲ್ಲಾ ಇದರಿಂದ ಬಹುತೇಕ ಜನ ಐಎಎಸ್ ಅಧಿಕಾರಿಗಳು ನಾವು ಐಎಎಸ್‌ನ್ನು ಮಾಡಿ, ಈ ಸರ್ಕಾರದಲ್ಲಿ ರಾಜ್ಯದ ಅಭಿವೃದ್ಧಿಯ ಬಗ್ಗೆ, ರಾಜ್ಯದ ಕೆಲಸದ ಬಗ್ಗೆ ಚಾಚೂತಪ್ಪದೆ ಪ್ರಾಮಾಣಿಕವಾಗಿರುವಾಗ ನಮ್ಮ ಮೇಲೆ ಸರ್ಕಾರ ಗದಾಪ್ರಹಾರವನ್ನು ಮಾಡುತ್ತದಲ್ಲಾ ಎಂದು ಒಳಗೇ ಕೊರಗುತ್ತಿದ್ದಾರೆ, ಬಹಿರಂಗವಾಗಿ ಅವರು ಹೇಳುವುದಕ್ಕೆ ಆಗುತ್ತಿಲ್ಲ. ಹೇಳಿದರೆ.. ಅವರ ಮೇಲೆ ಕಾನೂನು ಕಟ್ಟಲೆಗಳನ್ನು ತರುತ್ತಿದ್ದೀರಿ. ಆದ್ದರಿಂದ ಈ

ರಾಜ್ಯ ಸರ್ಕಾರದಲ್ಲಿ ಐ.ಎ.ಎಸ್.ನ ನಿಷ್ಠಾವಂತರದೇ ಒಂದು ಗುಂಪಾಗಿದೆ. ಅದರಲ್ಲಿ ಬೇರೆ ಮಾತೇ ಇಲ್ಲ. ಅಧಿಕಾರಿಗಳಾದವರು ಮುಖ್ಯಮಂತ್ರಿಯವರ ಬಗ್ಗೆ ಲಘುವಾಗಿ ಮಾತನಾಡಬಾರದು, ನಿಜ. ಇದು ರಾಜ್ಯದ ಇತಿಹಾಸದಲ್ಲಿ ಒಂದು ಅಪಚಾರ. ಮುಖ್ಯಮಂತ್ರಿಗಳ ಮೇಲೆ ಹಿಂದಿನ ಮುಖ್ಯಕಾರ್ಯದರ್ಶಿಯವರು ಕಟ್ಟದಾಗಿ 2-3 ಪದಗಳನ್ನು ಉಪಯೋಗಿಸಿದ್ದಾರೆ.

ಈ ರೀತಿ ಕೆಟ್ಟಪದಗಳನ್ನು ಉಪಯೋಗಿಸಿರತಕ್ಕದ್ದು ಸರಿಯಲ್ಲ, ನಾನು ಅದನ್ನು ಒಪ್ಪುವುದಿಲ್ಲ, ನಾನು ವಿರೋಧ ಮಾಡತ್ತೇನೆ. ಆದರೆ ಉಪಯೋಗಿಸಿ ಆಗಿಹೋಯಿತು. ಆ ಮಾತುಗಳ ಬಗ್ಗೆ ನೀವು ಏನು ಹೇಳುತ್ತೀರಿ? ಒಬ್ಬ ಉನ್ನತ ಸ್ಥಾನದಲ್ಲಿರತಕ್ಕ ಮುಖ್ಯಕಾರ್ಯದರ್ಶಿ ಹೇಳಿದಂತಹ ಮಾತು ಇದೆಯಲ್ಲಾ ಅದರ ಬಗ್ಗೆ ನಿಮಗೆ ಬಿಟ್ಟಿದ್ದೇನೆ. ನಿಮ್ಮ ಆತ್ಮ ಸ್ಥೈರ್ಯಕ್ಕೆ ಬಿಟ್ಟಿದ್ದೇನೆ, ನಿಮ್ಮ ವಿಚಾರಕ್ಕೆ ಬಿಟ್ಟಿದ್ದೇನೆ. ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈಗ ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಮಾತನ್ನು ಹೇಳುತ್ತಿದ್ದೇನೆ. ಈಗ ಚುನಾವಣೆ ಬಂದಿದೆ. ಯಾವ ಘಳಿಗೆಯಲ್ಲಾದರೂ ಚುನಾವಣೆಯ ದಿನಾಂಕವನ್ನು ಪ್ರಕಟ ಮಾಡಬಹುದು. ನಾಳೆಯಿಂದ ಸುಮಾರು ಐವತ್ತು ಜನ ಉನ್ನತ ಐ.ಎ.ಎಸ್, ಐ.ಪಿ.ಎಸ್ ಅಧಿಕಾರಿಗಳನ್ನು ಬದಲಾವಣೆ ಮಾಡಬೇಕೆಂದು ಒಂದು ಪಟ್ಟಿ ನಿಮ್ಮ ಸರ್ಕಾರದಲ್ಲಿ ತಯಾರಾಗಿದೆ ಎಂದು ಗೊತ್ತಾಗಿದೆ. ಚುನಾವಣೆ ಮುಗಿದ ಮೇಲೆ ಏನಾದರೂ ಮಾಡಿಕೊಳ್ಳಿ. ಚುನಾವಣೆ ಇರುವುದರೊಳಗೆ ನೀವು ಆ ಪಟ್ಟಿಯನ್ನು ಪ್ರಕಟಣೆ ಮಾಡಬೇಡಿ, ಬದಲಾವಣೆ ಮಾಡುವುದಕ್ಕೆ ಹೋಗಬೇಡಿ. ಬದಲಾವಣೆ ಅವರೂ ಸಹ ಈ ಸಂದರ್ಭದಲ್ಲಿ ಎಲ್ಲಿಗೆ ಹೋಗಬೇಕು. ಆ ಪರಿಸ್ಥಿತಿ ಉದ್ಭವ ಆಗುತ್ತದೆ. ಅದಕ್ಕೆ ನಾನು ತಮಗೆ ಅತ್ಯಂತ ಗಂಭೀರವಾಗಿ ಹೇಳುತ್ತಿದ್ದೇನೆ. 1972 ರಿಂದ ಇಲ್ಲಿಯವರೆಗೆ ಈ ಸದನದ ಮೇಲೆ ಬಹಳ ಪವಿತ್ರವಾದಂತಹ ಧರ್ಮ ದೇವತೆಯಾದ ತಕ್ಕಡಿಯನ್ನು ನಾವು ಹಾಕಿಕೊಂಡಿದ್ದೇವೆ.

ಈ ಸದನದಲ್ಲಿ ಭವ್ಯಪರಂಪರೆಯನ್ನು ನಿರ್ಮಾಮ ಮಾಡಿದಂತಹ ಅನೇಕ ಜನ ಮಂತ್ರಿಗಳು, ಮಹೋದಯ ಶಾಸಕರು ಬಂದು ಹೋಗಿದ್ದಾರೆ. 1972ರಿಂದ ಇಲ್ಲಿಯವರೆಗೆ ಆಗಿರತಕ್ಕಂಥ ಎಲ್ಲಾ ಸರ್ಕಾರಗಳ ಸಮಗ್ರ ಮಂತ್ರಿಗಳ ಆಸ್ತಿಯನ್ನು ತನಿಖೆ ಮಾಡುವುದಕ್ಕೆ ಒಂದು ಆಯೋಗವನ್ನು ಸರ್ಕಾರ ರಚನೆ ಮಾಡುತ್ತದೆಯೇ ಎಂದು ನಾನು ಕೇಳುತ್ತಿದ್ದೇನೆ. 1972 ರಿಂದ ಇಲ್ಲಿಯವರೆಗೆ ಎಲ್ಲಾ ಮಂತ್ರಿಮಂಡಲಗಳಲ್ಲಿ ಮಂತ್ರಿಗಳು ಅವರ ಆಸ್ತಿಯನ್ನು ಸಮಗ್ರವಾಗಿ ತನಿಖೆ ಮಾಡುವುದಕ್ಕೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ನೇಮಕ ಮಾಡಿ, ಆಯೋಗ ಮಾಡತಕ್ಕಂಥಹ ಧೈರ್ಯ ಈ ಸರ್ಕಾರಕ್ಕೆ ಇದೆಯಾ? ಎಲ್ಲರ ಬಣ್ಣ ಬಯಲಾಗಲಿ.

ಶ್ರೀ ಗೋಪಾಲ ಮುಕುಂದ ಕಾನಡೆ : ಅದರ ಹಿಂದೆ ಇದ್ದವರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : 1972ರ ಹಿಂದೆ ಇದ್ದದ್ದು ಶರಾವತಿ ಪ್ರಕರಣ ಮುಂತಾದುವು ಲಕ್ಷಗಟ್ಟಲೆ ವಿಚಾರಗಳು. ಅಲ್ಲಿಗೆ ಹೋಗುವುದಿಲ್ಲ. ಅಲ್ಲಿಂದೀಚೆಗೆ ಬಂತಲ್ಲಾ, ಅದು ಬಹಳ ಲೆಕ್ಕ ಇಲ್ಲದ ಹಾಗೆ ಹೋಗಿದೆ. ಯಾರ್ಯಾರ ಆಸ್ತಿ ಎಲ್ಲೆಲ್ಲಿ ಇದೆಯೋ, ಬೆನಾಮಿ ಹೆಸರುಗಳಲ್ಲಿ ಯಾರ್ಯಾರ ಮನೆ ಎಲ್ಲೆಲ್ಲಿ ಇದೆಯೋ, ಅದೆಲ್ಲ ಲೆಕ್ಕ ಇಲ್ಲದಂತೆ ಇದೆ. ಇವೆಲ್ಲವನ್ನು ಸಮಗ್ರವಾಗಿ ತನಿಖೆ ಮಾಡಲು ಸುಪ್ರೀಂ ಕೋರ್ಟಿನ ನ್ಯಾಯಧೀಶರನ್ನು ನೇಮಿಸಿ ತನಿಖೆ ಆಜ್ಞೆ ಮಾಡಿದರೆ ಬಹುಶಃ ರಾಜಕಾರಣದ ಬಣ್ಣವೂ ಬದಲಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಪ್ರಾಮಾಣಿಕವಾಗಿ ಕೇಳುತ್ತೇನೆ.

ಈಗ ಭೂನ್ಯಾಯ ಮಂಡಳಿಗಳಲ್ಲಿ ಮಾಡಿದ್ದಾರೆ. ಈ ಭೂ ನ್ಯಾಯಮಂಡಳಿಗಳಲ್ಲಿ ಯಾರ್ಯಾರು ಸದಸ್ಯರನ್ನು ನೇಮಕ ಮಾಡಿದ್ದಾರೆಂದು ತಮಗೆಲ್ಲ ನೋಟೀಸುಗಳು ಬಂದಿರ ಬಹುದು. ನನಗಂತೂ ಬಂದಿದೆ. ನನ್ನ ಒಬ್ಬನನ್ನು ಬಿಟ್ಟು ಇನ್ನು ಮೂರು ಜನ ಕಾಂಗ್ರೆಸ್‌ನವರೆ, ಹೀಗಾದರೆ ಏನು ತೀರ್ಪುಗಳು ಬರುತ್ತವೆ? ಕಾಂಗ್ರೆಸ್‌ನವರು ತೀರ್ಪುಗಳನ್ನು ಕೊಡಿಸಬೇಕೆಂದು ಮಡಿದ್ದರಾ? ಕೊಡುವ ತೀರ್ಪೆಲ್ಲಾ ಕಾಂಗ್ರೆಸ್‌ನವರ ತೀರ್ಪು. ಈ ಭೂನ್ಯಾಯ ಮಂಡಳಿಗಳನ್ನು ನೀವು ಕಾಂಗ್ರೆಸ್ ಕಾರ್ಯಾಲಯ ಮಾಡಿಕೊಂಡಿದ್ದೀರಾ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : 1985ರಲ್ಲಿ ಏನಾಗಿದೆ ಬಂದು ಸ್ವಲ್ಪ ವಿಚಾರಿಸಿ.

ಶ್ರೀ ಎಲ್.ಆರ್. ಶಿವರಾಮೆಗೌಡ : ಆಯಾ ಪಕ್ಷಗಳ ಸರ್ಕಾರ ಇದ್ದಾಗ ಯಾರ್ಯಾರನ್ನು ನೇಮಕ ಮಾಡಿದ್ದರು ಎನ್ನುವುದುದನ್ನು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶಿವರಾಮೇಗೌಡರು, ರಾಮಕೃಷ್ಣ ಹೆಗಡೆಯವರ ಸರ್ಕಾರವನ್ನು ಬೈಯಲಿ ಎಂದು ನನಗೆ ಚುಚ್ಚುತ್ತಿದ್ದಾರೆ. ನಾನು ಈಗ ಹಿಂದಿನ ಸರ್ಕಾರವನ್ನು ಹೊಗಳಿ ಏನು ಮಾತನಾಡುತ್ತಿಲ್ಲ . ಈ ಸರ್ಕಾರದವರು ಇಲ್ಲಿಗೆ ಹೊಸ ದೊಡ್ಡ ಶಿಲಾಯುಗ ತಂದರು ಮತ್ತು ಚಿನ್ನದ ಬೆಳಕನ್ನು ಹರಿಸಿದರು ಎಂದು ನಾನು ಹೇಳುತ್ತಿಲ್ಲ. ಹಿಂದಿನ ಮುಖ್ಯಮಂತ್ರಿಗಳು ವರ್ಷದಲ್ಲಿ 9-10 ತಿಂಗಳು ದೆಹಲಿಯಲ್ಲಿರುತ್ತಿದ್ದರು. ನಮ್ಮ ಮುಖ್ಯಮಂತ್ರಿಗಳು ಹಳ್ಳಿಯಲ್ಲಿ ಡೋಲು ಬಾರಿಸಿಕೊಂಡಿದ್ದಾರೆ. ಇವೆರಡರಲ್ಲಿ ವ್ಯತ್ಯಾಸ ಏನಿಲ್ಲ, ಒಂದು ನಾಣ್ಯದ ಎರಡು ಮುಖಗಳು ಅಷ್ಟೆ ಅವರು 90 ದಿವಸ ದೆಹಲಿಯಲ್ಲಿ ಇರುತ್ತಿದ್ದರು. ಇವರು ಹಳ್ಳಿಯಲ್ಲಿ ಮೂರು ತಿಂಗಳು ಇರುತ್ತಾರೆ. ಒಂದು ನಾಣ್ಯದ ಎರಡು ಮುಖಗಳು ನಾನು ಅದರ ಬಗ್ಗೆ ಚಿಂತನೆಪಡುವುದಕ್ಕೆ ಹೋಗುವುದಿಲ್ಲ. ನಾನು ಅದನ್ನೇ ದೊಡ್ಡದಾಗಿ ಬೆಳೆಸಲಿಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಚಿಕ್ಕೇಗೌಡರೆ ಪ್ರಮಾಣವಚನಕ್ಕೆ ಹೋಗುತ್ತೀರಿ ಎಂದು ಅಂದುಕೊಂಡಿದ್ದೆ. ನೀವು ಹೋಗುವ ಅವಕಾಶ ಇಲ್ಲವಲ್ಲ ಎಂದು ನನಗೆ ಚಿಂತನೆಯಾಯಿತು.

ಶ್ರೀ ಎಲ್.ಆರ್. ಶಿವರಾಮೇಗೌಡ : ವಾಟಾಳ್ ನಾಗರಾಜ್‌ರವರೆ, ತಾವು ಡೋಲು ಸರ್ಕಾರ ಎಂದು ಹೇಳಿದಿರಿ, ಯಾವ ಜನರು ಈ ಸರ್ಕಾರದಿಂದ ಏನೇನು ಒಳ್ಳೆಯ ಕೆಲಸಗಳನ್ನು ನಿರೀಕ್ಷಣೆ ಮಾಡಿದ್ದರು ಅದನ್ನು ತೆಗೆದುಕೊಂಡವರು ಡೋಲು ಬಾರಿಸಿದರು. ಅವರ ಜೊತೆ ಇವರು ಡೋಲು ಬಾರಿಸಿದರು, ಕುಣಿದರು. ಬೇರೆಯವರು ಏನು ಕುಣಿದರು ಎಂದು ದೇಶಕ್ಕೆ ಗೊತ್ತಿದೆ. ಅದನ್ನೂ ತಾವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಬೇರೆಯವರು ಕುಣಿದದ್ದು ನನಗೆ ಕಾಣಲಿಲ್ಲ, ನೀವೇ ಹೇಳಿಬಿಡಿ, ಗೊತ್ತಾಗಲಿ.

ಶ್ರೀ ಎಲ್.ಆರ್. ಶಿವರಾಮೆಗೌಡ : ಕೆಲವರು ಔಟ್ ಡೋರ್ ಮಾಡುತ್ತಾರೆ. ಕೆಲವರು ಇನ್ ಡೋರ್ ಮಾಡುತ್ತಾರೆ. ತಾವು ಡೋಲು ಸರ್ಕಾರ ಎಂದು ಹೇಳುತ್ತಿದ್ದಾರಲ್ಲಾ, ಡೋಲು ಬಾರಿಸಿ ಕುಣಿಸಿದವರು ಬೇರೆ ಯಾರೂ ಅಲ್ಲ ಸುಮಾರು 11 ಸಾವಿರ ಜನರಿಗೆ ಅಪಾಯಿಂಟ್‌ಮೆಂಟ್ ಹೋಗಿದೆ, ಅವರು ಕುಣಿದರು, ಅವರ ಜೊತೆಯಲ್ಲಿ ಮುಖ್ಯ ಮಂತ್ರಿಗಳು ಕುಣಿದಿದ್ದಾರೆ. ನಾಲ್ಕು ವರ್ಷಗಳಿಂದ ಅಪಾಯಿಂಟ್‌ಮೆಂಟ್‌ಗೆ

ಕಾಯ್ದುಕೊಂಡಿದ್ದರಲ್ಲ, ಅವರು ಡೋಲು ಕುಣಿದರು. ಬೇರೆಯವರು ಏನು ಮಾಡಿದ್ದಾರೆ ಅದನ್ನು ಹೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ಅವರು ಡೋಲು ಬಾರಿಸಿದ್ದು ತಪ್ಪು ಎಂದು ಹೇಳುವುದಿಲ್ಲ. ನನಗೆ ಗೊತ್ತಿದೆ, ಅವರಿಗೆ ಒಂದು ಆಸ್ಥೆ ಇದೆ, ಒಂದು ಚಿಂತನೆ ಇದೆ, ಕಲೆ ಇದೆ. ಅದರ ಬಗ್ಗೆ ಅಭ್ಯಾಸ ಇದೆ. ನಾನು ಅದು ತಪ್ಪು ಎಂದು ಹೇಳುವುದಿಲ್ಲ. ನಾಳೆ ಒಂದು ಬುಡುಬುಡುಕೆ ತಂದು ಕೊಡುತ್ತೇನೆ, ಅದನ್ನು ಬಾರಿಸಲಿ. ರಸ್ತೆಯಲ್ಲಿ ಬುಡಬುಡಕೆ ಬಾರಿಸಿಕೊಂಡು ನಾಳೆದಿವಸ ನಿಮ್ಮ ರಸ್ತೆಗೆ ಇಂತಹವರು ಬರುತ್ತಾರೆ, ಆಗುತ್ತದೆ, ನಿಮ್ಮ ಮನೆ ಹೀಗೆ ಆಗುತ್ತದೆಂದು ಹೇಳುತ್ತಾರಲ್ಲ ಹಾಗೆ ಏನು ಬೇಕಾದರೂ ಬಾರಿಸಿಕೊಂಡು ಹೋಗಲಿ. ಈಗ ನಾನು ಆ ಪ್ರಶ್ನೆಗೆ ಹೋಗುವುದಿಲ್ಲ.

ಉಪಾಧ್ಯಕ್ಷರು : ಈಗ 6 ಗಂಟೆಯಾಗಿದೆ. ಇನ್ನು ಸ್ವಲ್ಪ ಹೊತ್ತಿನಲ್ಲಿ ತಾವು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನನಗೆ ಇನ್ನೂ 35 ನಿಮಿಷ ಆದರೂ ಬೇಕು. ಇನ್ನು ರಸ್ತೆಗೆ ಬಂದಿಲ್ಲ.

ಉಪಾಧ್ಯಕ್ಷರು : ನೀವು ಬೇರೆ ಏನೇನೋ ಮಾತನಾಡುತ್ತಿದ್ದೀರಿ. ಬುಡಬುಡಕೆ, ಡೋಲು ಎಲ್ಲಾ ಏತಕ್ಕೆ ಬೇಕು.

ಶ್ರೀ ವಾಟಾಳ್ ನಾಗರಾಜ್: ನಾನು ಯಾರನ್ನಾದರೂ ಕುರಿತು ಕೆಟ್ಟದ್ದು ಎಂದು ಹೇಳಿಲ್ಲ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ವಾಟಾಳ್ ನಾಗರಾಜ್ ದಾರಿ ತಪ್ಪುತ್ತಿದ್ದಾರೆ ಅವರು ಸರಿಯಾದ ದಾರಿಯಲ್ಲಿ ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಅಭಿವೃದ್ಧಿ ಬಗ್ಗೆ ಪ್ರತಿ ರಾಜ್ಯಪಾಲರ ಭಾಷಣದಲ್ಲೂ ಚಿಂತನೆ ಇದೆ. ನನಗನಿಸುತ್ತದೆ, ಈ ಬೆಂಗಳೂರು ನಗರವನ್ನು ಒಂದು ರೀತಿಯಲ್ಲಿ ಯಮಲೋಕವನ್ನು ಮಾಡುತ್ತಿದ್ದಾರೆ. ಬೇರೆ ಮತೇ ಇಲ್ಲ. ಬೆಳಿಗ್ಗೆ ಆ ಒಂದು ಕೆಟ್ಟ ಗಾಳಿ, ಅಚಾತುರ್ಯವಾದ ರಸ್ತೆಗಳು, ಅನಾದರಣೀಯರಾಗಿ ನಡೆಯತಕ್ಕಂಥ ಸಂಚಾರ, ಯದ್ವಾತದ್ವ ಬೆಳೆದಿರತಕ್ಕ ಮನೆಗಳು, ಬಿಲ್ಡಿಂಗ್‌ಗಳು, ಸಿಕ್ಕಾಪಟ್ಟೆ ಬೆಳೆದಿರತಕ್ಕ ಜನಸಂಖ್ಯೆ- ಇವೆಲ್ಲಾ ನೋಡಿದಾಗ ಬೆಂಗಳೂರು ಅಭಿವೃದ್ಧಿ ಬಗ್ಗೆ ಸಮಗ್ರ ಚಿಂತನೆ ಮಾಡಿ ಒಂದು ವಿಶೇಷವಾದಂಥ ಯೋಜನೆಯನ್ನು ತಂದು ಈ ಯೋಜನೆಗೆ ಹೆಚ್ಚಿನ ಹಣವನ್ನು ಕೊಟ್ಟು ಬೆಂಗಳೂರು ನಗರವನ್ನು ಬೆಳೆಸುವುದರಲ್ಲಿ ಚಿಂತನೆಯಂತೂ ಇಲ್ಲಿ ಇಲ್ಲ.

ಮೊದಲು ನೀವು ಮಾಡಬೇಕಾದ ಕೆಲಸ ಏನೆಂದರೆ, ಬೆಂಗಳೂರಿಗೆ ವಲಸೆ ಬರತಕ್ಕದನ್ನು ತಾವು ಮೊದಲು ನಿಲ್ಲಿಸಬೇಕು. ಇದನ್ನು ತಪ್ಪಿಸದಿದ್ದರೆ ನನಗನಿಸುತ್ತದೆ, ಇನ್ನು 2000 ವರ್ಷಕ್ಕೆ ಈ ಬೆಂಗಳೂರಿನ ಜನಸಂಖ್ಯೆ 50 ಲಕ್ಷಕ್ಕೆ ಮುಟ್ಟಿತ್ತದೆ. ಈಗಾಗಲೇ ಸುಮಾರು 45-50 ಲಕ್ಷದಷ್ಟಿದೆ. ಬೆಂಗಳೂರಿಗೆ ಪಕ್ಕದಲ್ಲೇ ಇರತಕ್ಕ ಕನಕಪುರ, ಹೊಸಪೇಟೆ, ನೆಲಮಂಗಲ, ರಾಮನಗರ- ಇವೆಲ್ಲಾ ಸುಮಾರು 2000 ವರ್ಷದ ಹೊತ್ತಿಗೆ ಬೆಂಗಳೂರಿಗೆ ಸೇರಿಹೋಗುತ್ತದೆ. ಆಗ ಬೆಂಗಳೂರಿನ ಗತಿ ಏನು? ಆಗ ನಿಜವಾಗಿಯೂ ಯಮಯಾತನೆ ಆಗುತ್ತದೆ. ಬೆಂಗಳೂರು ನಗರ ನಿಜವಾಗಿಯೂ ಬೆಂಕಿಯ ನಗರವಾಗುತ್ತದೆ. ಅನಾರೋಗ್ಯದ ನಗರವಾಗುತ್ತದೆ. ಈ ಪರಿಸ್ಥಿಯನ್ನು ಮುಟ್ಟುವುದಕ್ಕೆ ಮುಂಚಿತವಾಗಿ ಸರ್ಕಾರ ಇದರ ಬಗ್ಗೆ ಯೋಚಿಸಿ ಕ್ರಮ ತೆಗೆದುಕೊಳ್ಳಬೇಕು.

ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಾವು ಆಕಾಶದ ಸೇತುವೆಗಳನ್ನು ಕಟ್ಟಿಸುತ್ತೇವೆ ಜನಗಳಿಗೆ ಅನುಕೂಲ ಮಾಡುತ್ತೇವೆ ಎಂದು ಇನ್ನೂ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆಂದು....

ಶ್ರೀ ಎ.ಬಿ. ಜಕನೂರು : ತಾವು ಸಂವಿಧಾನವನ್ನು ನೋಡಿದ್ದೀರಾ? ಅದರಲ್ಲಿ Every citizen has got a right to go and settle anywhere in India. You cannot stop.

ಶ್ರೀ ವಾಟಾಳ್ ನಾಗರಾಜ್ : ಸಂವಿಧಾನದಲ್ಲಿ ಅವರು ಬರೆದುಕೊಂಡಿರಲಿ, ನಾನಂತೂ ಅದಕ್ಕೂ ವಿರುದ್ಧವಾಗಿದ್ದೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತು ನಿಮ್ಮ ಸಂವಿಧಾನವನ್ನು ನೆಕ್ಕಿ ನಮ್ಮ ಕನ್ನಡಿಗರು ನೆಲವನ್ನು ಕಚ್ಚಿದ್ದಾರೆ, ಸಮಾಧಿಗೆ ಹೋಗುತ್ತಿದ್ದಾರೆ. ಕನ್ನಡಿಗರು ಕೆಳಗೆ ಬಿದ್ದಿದ್ದಾರೆ. ನೂರಕ್ಕೆ ಎಂಭತ್ತು ಭಾಗ....

ಶ್ರೀ ಆರ್. ದಯಾನಂದರಾವ್ : ಮಾನ್ಯ ಉಪಾಧ್ಯಕ್ಷಣೆಯವರೆ, ಮಾನ್ಯ ಸದಸ್ಯರು ಏನೇನೋ ಭಾಷೆಯನ್ನು ಉಪಯೋಗಿಸುತ್ತಿದ್ದಾರೆ. ಅದನ್ನು ಕಡತದಿಂದ ತೆಗೆದುಹಾಕಬೇಕು. What is this? He is using unparliamentary words and you should stop all things.

ಉಪಾಧ್ಯಕ್ಷರು : ನಾನು ನೋಡಿ ಹೇಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಕೆಟ್ಟ ಭಾಷೆ ಏನಿದೆ?

SRI R. DAYANANDA RAO : We have to warn him. Let him use proper words. What is this?

ಶ್ರೀ ವಾಟಾಳ್ ನಾಗರಾಜ್ : ಈ ಮಹಾ ಪಂಡಿತರಿಂದ ನಾನು ಭಾಷೆಯನ್ನು ಕಲಿಯಬೇಕಾದ ಗತಿ ನನಗೆ ಎಂದೂ ಬರುವುದು ಬೇಡ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸರ್ವಜ್ಞರು ಯಾರು ಎಂದು ನಮಗೂ ಗೊತ್ತಿದೆ ನಿಮಗೂ ಗೊತ್ತಿದೆ.

ಶ್ರೀ ಡಿ. ಹಲಗೇಗೌಡ : ಮಾನ್ಯ ಉಪಾಧ್ಯಕ್ಷಣೆಯವರೆ ನಾವು ಶಾಸನ ಸಭೆಗಳಲ್ಲಿ ಎಲ್ಲಾ ಸಭೆಗಳಲ್ಲೂ ಕೂಡ ಶಾಸನಬದ್ಧವಾಗಿ, ಸಂವಿಧಾನಬದ್ಧವಾಗಿ ನಡೆದುಕೊಳ್ಳುತ್ತೇವೆಂದು ಪ್ರಮಾಣ ವಚನವನ್ನು ಸ್ವೀಕರಿಸಿ ಬಂದಿರುವಾಗ, ಈ ಸಭೆಯಲ್ಲಿ ನಾವು ಸಂವಿಧಾನಬದ್ಧವಾಗಿ ನಡೆದುಕೊಳ್ಳುವುದನ್ನು ಬಿಟ್ಟು ಅದಕ್ಕೆ ವ್ಯತಿರಿಕ್ತವಾಗಿ, ಸಂವಿಧಾನಕ್ಕೆ ವಿರುದ್ಧ ಎನ್ನತಕ್ಕ ಪದಗಳನ್ನು ಮಾನ್ಯ ಸದಸ್ಯರು ಬಳಸಬಹುದೆ? ಅದನ್ನು ಆಡಬಹುದೆ? ಸಂವಿಧಾನವೇ ನಮ್ಮ ಜೀವಾಳ. ನಮ್ಮ ರಾಜ್ಯದ ಆಡಳಿತದ ಶಾಸನ ಸಭೆಗಳ, ಲೋಕಸಭೆಗಳ ಅಡಿಪಾಯವೇ ಅದು ಆಗಿರುವಾಗ, ಅದನ್ನು ವಿರೋಧಿಸುತ್ತಿದ್ದೇನೆಂದು ಈ ಸಭೆಯಲ್ಲಿ ಹೇಳಬಹುದೆ? ಇದಕ್ಕೆ ತಮ್ಮ ರೂಲಿಂಗ್ ಬೇಕು.

ಶ್ರೀ ವಾಟಾಳ್ ನಾಗರಾಜ್ :ಮಾನ್ಯ ಉಪಾಧ್ಯಕ್ಷಣೆಯವರೆ, ಸಂವಿಧಾನವನ್ನು ಅಗೌರವ ಮಾಡಬೇಕೆಂದು ಉದ್ದೇಶ ನನ್ನದಲ್ಲ, ಇದರ ಅರ್ಥ ಬಹಳ ವಿಶಾಲವಾಗಿದೆ. ಈ ರಾಜ್ಯದಲ್ಲಿ ನಮ್ಮ ಮನೆಗೇ ಬೆಂಕಿ ಬಿದ್ದಿರುವಾಗ ಮತ್ತೊಬ್ಬರ ಚಿಂತೆ ನಮಗೇಕೆ? ನಮ್ಮ ಮನೆಗೆ ಬೆಂಕಿ ಬಿದ್ದಿದೆ, ಅಷ್ಟೇ ಹೊರತು ಸಂವಿಧಾನವನ್ನು ವಿರೋಧ ಮಾಡಬೇಕೆಂಬ ಭಾವನೆ ನನ್ನದಲ್ಲ. ನಾವೆಲ್ಲರೂ ಸಂವಿಧಾನಕ್ಕೆ ಬದ್ಧರಾಗಿರುವವರು. ಆದರೆ ಸಂವಿಧಾನದ ಹೆಸರಿನಲ್ಲಿ ನಮ್ಮ ಕತ್ತನ್ನು ಯಾರೂ ಕೊಯ್ಯಬಾರದು ಎಂದು

ಅಷ್ಟೆ. ನಮ್ಮ ಮೇಲೆ ಯಾರೂ ಧಾಳಿ ಮಾಡಬಾರದೆಂದು ಅಷ್ಟೇ ಹೊರತು ಬೇರೆ ಉದ್ದೇಶವಲ್ಲ. ಭಾಷಾವಾರು ಪ್ರಾಂತ ಎಂದರೇನು? ಕರ್ನಾಟಕ, ಆಂಧ್ರ ಕೇರಳ, ತಮಿಳ್ನಾಡು ಈ ರೀತಿ ಭಾಷಾವಾರು ಪ್ರಾಂತ್ಯವಾದುದು ಅಯಾಯಾ ಭಾಷೆಯ ಜನರು ಒಂದು ಕಡೆ ಸೇರಬೇಕೆಂಬುದೇ ಭಾಷಾವಾರು ಪ್ರಾಂತ್ಯ. ಈ ಕಾರಣದಿಂದಾಗಿಯೇ 1956 ಈ ರಾಜ್ಯ ಕರ್ನಾಟಕ ಏಕೀಕರಣವಾಯಿತು. ಅವತ್ತು ಹರಿದು ಹಂಚಿಹೋಗಿದ್ದ ಕನ್ನಡ ನಾಡು ಎಲ್ಲಾ ಒಂದಾಯಿತು. ಈ ದೃಷ್ಟಿಯಲ್ಲಿ ನಾನು ಹೇಳಿದ್ದು. ಕನ್ನಡಿಗರಿಗೆ ಅದಂಥ ಈ ಕರ್ನಾಟಕ ರಾಜ್ಯದಲ್ಲಿ ಬೇರೆ ರಾಜ್ಯದವರು ಬಂದು ಕುಳಿತುಕೊಳ್ಳಬೇಕೆಂಬ ಭಾವನೆಯಿಂದ ಅಲ್ಲ, ಮತ್ತು ಸಂವಿಧಾನವನ್ನು ವಿರೋಧ ಮಾಡಬೇಕೆಂಬ ಉದ್ದೇಶ ನನಗೇನೂ ಇಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಕಾಸರಗೋಡಿನ ಬಗ್ಗೆ ತಮ್ಮ ಹೋರಾಟ ಏನೂ ಇಲ್ಲ ಅಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ಅದನ್ನೂ ನಾನು ಹೇಳುತ್ತೇನೆ. ಕಾಸರಗೋಡು....

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಬೆಂಗಳೂರಿನಲ್ಲಿ ಇದ್ದುಕೊಂಡು ತಮಿಳ್ನಾಡಿನ ಬಗ್ಗೆ ಮಾತನಾಡುತ್ತಿದ್ದೀರಿ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ನನಗೆ ಸ್ನೇಹಿತರು. ಕಾಸರಗೋಡಿನ ಬಗ್ಗೆ ನಾನು ನಿರಂತರವಾಗಿ ಹೋರಾಟ ಮಾಡಿದ್ದೇನೆ. ಕಾಸರಗೋಡಿನ ಬಗ್ಗೆ ಅಕ್ಕಲಕೋಟೆ ಬಗ್ಗೆ ತಾಳವಾಡಿಯಲ್ಲಿ ತಮಿಳುನಾಡಿನ ಜೈಲಿನಲ್ಲಿ ಇದ್ದೆ. ತಮಗೆ ಗೊತ್ತಿದೆ.

ಶ್ರೀ ರಮನಾಥ್ ರೈ : ತಾವು ಒಂದು ವಾತಾವರಣವನ್ನು ನಿರ್ಮಾಣಮಾಡಿ ಅಲ್ಲಿ ಹೋಗಿ ಚಳುವಳಿಯನ್ನು ಮಾಡಿ, ಇಲ್ಲಿ ಬರೀ ಹೇಳಿಕೆ ಕೊಟ್ಟರೆ ಅದಕ್ಕೆ ಚಳುವಳಿ ಎಂದು ಹೇಳುವುದಿಲ್ಲ. ಅದು ಚಳುವಳಿಯಾಗುವುದಿಲ್ಲ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಕನ್ನಡದವರು ಯಾರು ತೆಲುಗಿನವರು ಯಾರು ಎನ್ನುವದೇ ತಮಗೆ ಗೊತ್ತಿಲ್ಲ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೆಟ್ಟಿ ಎಂದರೆ ತೆಲುಗು ಎಂದು ತಿಳಿದುಕ್ಕೊಂಡಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಆ ಭಾವನೆ ಇಟ್ಟುಕೊಂಡಿಲ್ಲ. ದಕ್ಷಿಣ ಕನ್ನಡದ ಮಹಾವೀರರು ಎಂದು ನಾನು ತಿಳಿದುಕೊಂಡಿದ್ದೇನೆ. ಪರಶುರಾಮರ ನಾಡಿನ ಮಹಾ ಮಹಾ ವ್ಯಕ್ತಿಗಳೆಂದು ತಿಳಿದುಕೊಂಡಿದ್ದೇವೆ. ಅದಕ್ಕೆ ನಿಮಗೆ ವಿಶೇಷವಾದ ಗೌರವವಿದೆ. ದಕ್ಷಿಣ ಕನ್ನಡ ಎಂತಲೆ ಹೆಸರನ್ನು ಕೊಟ್ಟಿದೆ. ಕನ್ನಡ ಭಾಷೆಯಲ್ಲೇ ಸೇರಿಸಿದ್ದೇವೆ. ಉತ್ತರ ಕನ್ನಡ ಎಂದು ಇನ್ನೊಂದು ಭಾಷೆಯನ್ನು ಸೇರಿಸಿದ್ದೇವೆ. ಆದ್ದರಿಂದ ನೀವು ಎಷ್ಟು ಮೇರು ಪರ್ವತದಲ್ಲಿದ್ದೀರಿ ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ನಾವು ನೀವು ಎಲ್ಲ ಸೇರಿ ಈ ರಾಜ್ಯಕ್ಕೆ ಕಾಸರಗೋಡನ್ನು ಪಡೆಯಬೇಕು. ಅದಕ್ಕೆ ಹೋರಾಟ ಮಾಡೋಣ. ಆದರೆ ಇವತ್ತಿನದಿವಸ ಏನಾಗಿದೆ ಎಂದರೆ, ಮಂಗಳೂರು ಕೇರಳವಾಗುತ್ತಿದೆ. ಅದಕ್ಕೆ ಇವರದು ಉಸಿರೇ ಇಲ್ಲ, ನಮ್ಮ ವೀರರದು ಉಸಿರೇ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲಿ ಏನಾಗಿದೆ ಎಂದರೆ. ತಾವು ನಮ್ಮ ಊರಿಗೆ ಸ್ವಲ್ಪ ಬರಬೇಕು. ತಾವು ಈಗ ಮಂಗಳೂರೇ ಕೇರಳವಾಗಿದೆ ಎಂದು ಹೇಳಿದಿರಿ. ಅದು ಸರಿಯಲ್ಲ. ಮಂಗಳೂರು ಕೇರಳವಾಗುತ್ತಿದೆ ಎಂದು ಹೇಳುತ್ತಿದ್ದೀರಲ್ಲ

ಆ ಮಾತು ಸರಿಯಲ್ಲ. ಏಕೆಂದರೆ, ದಕ್ಷಿಣ ಕನ್ನಡದವರ ಪ್ರಭಾವ ಕೇರಳದವರ ಮೇಲೆ ಬಿದ್ದಿದೆಯೇ ಹೊರತು ಕೇರಳದವರ ಪ್ರಭಾವ ಮಂಗಳೂರಿನವರ ಮೇಲೆ ಬಿದ್ದಿಲ್ಲ. ತಾವು ಸ್ವಲ್ಪ ತಮ್ಮನ್ನೇ ಪ್ರಶ್ನೆ ಮಾಡಿಕೊಳ್ಳಬೇಕು. ತಾವು ಕನ್ನಿಡಿಗರು ಇಲ್ಲಿ ಹೇಗೆ ನಡೆದುಕೊಳ್ಳುತ್ತೀರಿ ಎಂದು ಪ್ರಶ್ನೆ ಮಾಡಿಕೊಳ್ಳಬೇಕು: ತಾವು ಮಲೆಯಾಳಿಗಳಾಗಲಿ, ಕೇರಳದವರಾಗಲಿ, ಬಹಳ ಬುದ್ಧಿವಂತರು, ಬಹಳ ಚತುರರು ಎಂದು ಏನು ಹೇಳುತ್ತೀರಿ ಆ ಚತುರತೆ ಆ ಪ್ರಾಬಲ್ಯತೆಯನ್ನ ಮಿಕ್ಕಿ ದಕ್ಷಿಣ ಕನ್ನಡ ಜಿಲ್ಲೆ ಈಗಲೂ ಕನ್ನಡದ ಗಂಡುಮೆಟ್ಟಾಗಿ ಉಳಿದಿದೆ. ಅದನ್ನು ತಾವು ತಿಳಿದುಕೊಳ್ಳಬೇಕು. ಅದನ್ನು ತಾವು ತಮ್ಮ ಪ್ರದೇಶಗಳಲ್ಲಿ ಉಳಿಸಿಕೊಂಡದ್ದೀರಾ ಎನ್ನುವ ಪ್ರಶ್ನೆಯನ್ನು ತಾವು ಹಾಕಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ಮಂಗಳೂರು ಗಂಡುಮೆಟ್ಟಿದ ನೆಲವೆಂದು ನಾನು ....

ಶ್ರೀ ಬಿ. ರಾಮನಾಥ್ ರೈ : ಕೇರಳದಲ್ಲಿ ಕರ್ನಾಟಕದ ಅಚ್ಚ ಕನ್ನಡ ಮಾತನಾಡುವ ಒಬ್ಬ ವ್ಯಕ್ತಿ ಲೋಕಸಭೆಯಲ್ಲಿ ಸತತವಾಗಿ ಕೆಲವು ವರ್ಷಗಳಿಂದ ಪ್ರತಿನಿಧಿಸುತ್ತಿದ್ದಾರೆ. ಅದು ಯಾವುದೇ ಪಕ್ಷವಿರಲಿ. ಇವತ್ತು ಮಾನ್ಯ ರಾಮಣ್ಣ ರೈ ಎಂಬುವರು ಅಚ್ಚ ಕನ್ನಡಿಗರಾಗಿ ಪ್ರತಿನಿಧಿಸುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಕೈಯಾರ ಕೈ ಇಣ್ಯ ರೈ ಅವರಿಗೆ ಅವರ ಮನೆಯಬಾಗಿಲಿಗೆ ಹೋಗಿ ಸನ್ಮಾನ್ಯ ಮಾಡಿಬಂದಿದ್ದೇನೆ. ತಾವು ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಆ ಮಾತನ್ನು ಏಕೆ ಹೇಳಿದೆ ಎಂದರೆ, ಇವತ್ತು ಕನ್ನಡಿಗರ ಮಾತು ಬರೀ ಘೋಷಣೆಯಲ್ಲಿಯೇ, ಮಾತಿನಲ್ಲಿಯೇ ಉಳಿಯಬಾರದು, ನಮ್ಮ ನಡವಳಿಕೆಯಲ್ಲಿ ನಮ್ಮ ಶೀಲದಲ್ಲಿ ನಮ್ಮ ಕನ್ನಡಿಗರ ವ್ಯಕ್ತಿತ್ವವನ್ನು ಎತ್ತಿ ಹಿಡಿಯುವುದರಲ್ಲಿ ನಾವು ಇವತ್ತು ಕೆಲಸ ಮಾಡಿದ್ದೇವೆ. ತಮ್ಮ ವಿಚಾರದಲ್ಲಿ ನಮ್ಮ ಮಾತು ಏನು ಇಲ್ಲ. ಆದರೆ ಒಟ್ಟು ಅಭಿಪ್ರಾಯ ಹೇಳುವುದು. ತಾವು ಹೋರಾಟ ಮಾಡಿದ್ದೀರಿ. ಅದಕ್ಕೆ ನಮ್ಮ ಮನ್ನಣೆ ಇದೆ. ನಮ್ಮ ದೃಷ್ಟಿಯಲ್ಲಿ ತಮಗೆ ಉನ್ನತವಾದಂಥ ಸ್ಥಾನ ಯಾವಾಗಲೂ ಇದೆ. ಅದರ ಬಗ್ಗೆ ವಿವಾದವಿಲ್ಲ. ಆದರೆ ತಮ್ಮ ಮುಖೇನ ನಾನು ನಮ್ಮ ಯಾವ ಕನ್ನಡ ಬಂಧುಗಳು ಬೆಂಗಳೂರಿನಲ್ಲಿ ಇದ್ದಾರೆ, ಬೇರೆ ಕಡೆ ಎಲ್ಲೆಲ್ಲಿದ್ದಾರೆ ಅಲ್ಲಿ ತಮ್ಮ ಕನ್ನಡದ ವ್ಯಕ್ತಿತ್ವವನ್ನು ಎಷ್ಟರಮಟ್ಟಿಗೆ ಉಳಿಸಿಕೊಳ್ಳುವುದಕ್ಕೆ ಶಕ್ತಿಯಾಗಿದ್ದಾರೆ. ಉಳಿಸಿಕೊಳ್ಳಲು ಯಾವ ರೀತಿ ಕೆಲಸ ಮಾಡಬೇಕು ಎನ್ನುವುದು ನಮಗೆ ಬೇಕು ದುರದೃಷ್ಟವಶಾತ್ ಈ ಸ್ವಾಭಿಮಾನ ಸ್ವಲ್ಪ ಕಡಿಮೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸುಮಾರು 20 ವರ್ಷಗಳ ಹಿಂದೆ ನಾನು ನಿಮ್ಮ ಕ್ಷೇತ್ರದಲ್ಲಿ ಯಾವುದೋ ಒಂದು ನ್ಯಾಯಾಲಯಕ್ಕೆ ಬಂದಾಗ ನಿಮ್ಮನ್ನು ಭೇಟಿಯಾಗಿದ್ದೆ. ಆಗ ತಾವು ಶಾಸಕರಾಗಿದ್ದೀರಿ. ನಾವು ನೀವು 20-25 ವರ್ಷಗಳ ಹಿಂದೆ ಭೇಟಿಯಾಗಿದ್ದೆವು. ಈಗ ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಇದಕ್ಕೆ ನಾನಾ ಕಾರಣಗಳಿವೆ. ಕನ್ನಡಿಗರ ಸ್ವಾಭಿಮಾನ ಕನ್ನಡತನ ಈ ರಾಜ್ಯ ಭದ್ರವಾಗಿ ಕನ್ನಡಿಗರಿಗೆ ಉಳಿಯಬೇಕೆನ್ನುವ ಬಗ್ಗೆ ನನ್ನದು ಅತ್ಯಂತ ಪ್ರಾಮಾಣಿಕವಾದ ಮಾತು. ಈ ಕೆಲಸ ಜನರಿಗಿಂತ ಹೆಚ್ಚಾಗಿ ಅಧಿಕಾರವನ್ನು ನಡೆಸತಕ್ಕಂಥ ತಮ್ಮ ಮೇಲೆ ಹೆಚ್ಚಿನ ಹೊಣೆ ಇದೆ. ತಮ್ಮ ಆಡಳಿತದ ಪ್ರಭಾವ ಇದೆಯಲ್ಲ. ನಿಮ್ಮ ಆಡಳಿತ ಗದ್ದುಗೆಯ ಪ್ರಭಾವ ಅದರ ಮೇಲೆ ಅತ್ಯಂತ ಪ್ರಾಮಾಣಿಕವಾಗಿ ಹೃದಯ ಬಿಚ್ಚಿ ನಾನು ವೈಯಕ್ತಿಕವಾಗಿ ಯಾರಿಗೂ ಹೇಳುತ್ತಿಲ್ಲ.

ಹೃದಯ ಬಿಚ್ಚಿ ಕರ್ನಾಟಕವನ್ನು ಬೆಳಸಬೇಕು. ಕನ್ನಡಿಗರನ್ನು ಉಳಿಸಬೇಕೆಂಬ ಪ್ರಾಮಾಣಿಕತೆಯಿಂದ ಆಡಳಿತ ನಡೆಸಿದರೆ ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ.

ಮಂಗಳೂರು ಬೇರೆ ಎಂಬ ಪ್ರಶ್ನೆ ನನ್ನಲ್ಲಿ ಇಲ್ಲ. ಅದರ ಬಗ್ಗೆ ನನಗೆ ಗೌರವ ಇದೆ. ಕಾಸರಗೋಡು ಈಗ ಜಿಲ್ಲೆ ಆಯಿತು. ಇದಕ್ಕೆ ಕಾರಣವೇನು? ಅಲ್ಲಿ ಕೇರಳದ ಜನರನ್ನು ಜಾಸ್ತಿ ಮಾಡಿ ಕಾಸರಗೋಡು ತುಳಿಯುವುದಕ್ಕೆ ನಡೆದಂತಹ ಪಿತೂರಿಯನ್ನು ನಾವು ನೋಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕಾಸರಗೋಡು ಇವತ್ತು ನಮ್ಮ ಕೈ ತಪ್ಪಿ ಹೋದದ್ದು ಮಂಗಳೂರು ಜನರಿಂದ ಅಲ್ಲ, ರಾಜಕೀಯ ಸ್ಥಾನವನ್ನು ಭದ್ರಗೊಳಿಸತಕ್ಕ ಬೆಂಗಳೂರಿನಲ್ಲಿರತಕ್ಕ ರಾಜಕಾರಣಿಗಳಿಂದ ಆಗಿದೆ. ಇದರ ಇತಿಹಾಸ ನಿಮಗೆ ಬೇಕೆ. ಆ ವಿಚಾರದಲ್ಲಿ ಚರ್ಚೆ ಮಾಡೋಣ. ಕಾಸರಗೋಡು ಮಂಗಳೂರಿನವರಿಂದ ಹೋಗಲಿಲ್ಲ. ಮಂಗಳೂರಿನವರಿಂದ ತಾವು ಅಪಹರಿಸಿದ್ದೀರಿ. ಇಲ್ಲಿರತಕ್ಕ ರಾಜಕಾರಣಿಗಳು ತಮ್ಮ ಅಧಿಕಾರವನ್ನು ಸ್ಥಿರಗೊಳಿಸಿಕೊಳ್ಳುವುದಕ್ಕೆ ಮಾಡಿದ ಪ್ರಯತ್ನದಿಂದ ಹೋಯಿತು. ದಯವಿಟ್ಟು ಈ ಬಗ್ಗೆ ವಿಮರ್ಶೆ ವಿಶ್ಲೇಷಣೆಗೆ ಹೋಗಬೇಡಿ. ಮಂಗಳೂರಿನವರ ವಿಚಾರವನ್ನು ಆದಷ್ಟು ಮುಟ್ಟಲಿಕ್ಕೆ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ಹೇಳಿದ ಹಾಗೆ, ನಾನು ಆ ಭಾವನೆಯನ್ನು ಇಟ್ಟುಕೊಂಡಿಲ್ಲ. ನನಗೆ ಕಾಸರಗೋಡಿನ ಬಗ್ಗೆ ಕಳಕಳಿ ಇರುವುದು ತಮಗೆ ಗೊತ್ತಿದೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ಕಾಸರಗೋಡಿನ ಬಗ್ಗೆ, ಗಡಿನಾಡಿನ ಕನ್ನಡಿಗರ ಬಗ್ಗೆ ನನಗೆ ತುಂಬಾ ಕಳಕಳಿ ಇದೆ. ಇವತ್ತು ಅಕ್ಕಲಕೋಟೆಯವರು ಬಂದಿದ್ದಾರೆ. ಅವರನ್ನು ತಮಗೆ ಭೇಟಿ ಮಾಡಿಸಿದ್ದೇನೆ. ಕರ್ನಾಟಕದ ಈ ಶಾಸನಸಭೆಯಲ್ಲಿ ಅಕ್ಕಲಕೋಟೆಯ ಅಚ್ಚುಕಟ್ಟಾದ ಭೂಪಟವನ್ನು ಪ್ರದರ್ಶನ ಮಾಡುತ್ತೇನೆ.

(ಮಾನ್ಯ ಸದಸ್ಯರು ಭೂಪಟವನ್ನು ಸಭೆಯ ಮುಂದೆ ಪ್ರದರ್ಶಿಸಿದರು)

ಇದು ಮಹಾರಾಷ್ಟ್ರ ಪ್ರದೇಶದಲ್ಲಿರತಕ್ಕ ಜಾಗ. ಇಲ್ಲಿ ಕನ್ನಡ ಶಾಲೆಗಳು ಇಲ್ಲ. ಕನ್ನಡಿಗರಿಗೆ ಉದ್ಯೋಗ ಇಲ್ಲ. ಅಕ್ಕಲಕೋಟೆಯಲ್ಲಿ ಕನ್ನಡಿಗರನ್ನು ಕೇಳುವವರು ಗತಿಯಿಲ್ಲ. 500 ಜನ ಅಲ್ಲಿ ಸತ್ಯಾಗ್ರಹ ಮಾಡುತ್ತಿದ್ದರು. ತಮ್ಮನ್ನು ಕರೆದುಕೊಂಡು ಹೋಗಿ ತೋರಿಸಿದೆ. ನಿಮ್ಮ ಬಗ್ಗೆ ನನಗೆ ಅಭಿಮಾನ ಇದೆ. ನಾನು ವೈಯಕ್ತಿಕವಾಗಿ ಮಾತನಾಡುತ್ತಿಲ್ಲ. ನಿಮಗೆ ಕನ್ನಡದ ಬಗ್ಗೆ ಕಳಕಳಿ ಇದೆ, ಇಲ್ಲವೆಂದು ಹೇಳುತ್ತಿಲ್ಲ. ನಿಮ್ಮ ಮುಖ್ಯ ಮಂತ್ರಿಗಳು ಸಹ ಅಷ್ಟೆ. ಅವರು ಯಾವತ್ತೂ ಶಾಸನಸಭೆಯಲ್ಲಿ ಕನ್ನಡದಲ್ಲಿ ಮಾತನಾಡುತ್ತಾರೆ. ವಿಧಿವಿಧಾನಗಳು ಇಂಗ್ಲಿಷ್‌ನಲ್ಲಿದ್ದರೂ ಕನ್ನಡದಲ್ಲಿ ಮಾತನಾಡುತ್ತಾರೆ. ಆದರೆ 72 ಜನ ನಿಮ್ಮ ಪಕ್ಷದ ಶಾಸಕರು ಕನ್ನಡ ಮಾಧ್ಯಮ ಶಾಲೆಗಳು ಬೇಡ, ಇಂಗ್ಲಿಷ್ ಮಾಧ್ಯಮ ಶಾಲೆಗಳು ಬೇಕು ಎಂದು ಸಹಿ ಮಾಡಿಕೊಟ್ಟಿದ್ದಾರಲ್ಲ ಅದಕ್ಕೆ ನೀವು ಏನು ಹೇಳುತ್ತೀರಿ? ಇದನ್ನು ಕನ್ನಡದ ಬಗೆಗಿನ ಅಭಿಮಾನ ಅನ್ನುತ್ತೀರೋ, ದುರಭಿಮಾನ ಅನ್ನುತ್ತೀರೋ? ಇದು ಯಾರಿಗೂ ಗೌರವ ತರುವ ಪ್ರಶ್ನೆ ಅಲ್ಲ. 72 ಜನ ಶಾಸಕರು ಇಂಗ್ಲಿಷ್ ಮಾಧ್ಯಮ ಶಾಲೆಗಳು ಬೇಕು ಎಂದು ಬರೆದುಕೊಡುತ್ತೀರಲ್ಲ ಇದರಿಂದ ಕನ್ನಡ ರಾಜ್ಯಕ್ಕೆ, ಕರ್ನಾಟಕ ರಾಜ್ಯಕ್ಕೆ ಗೌರವ ಬರುತ್ತದೆಯೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಕನ್ನಡಕ್ಕೆ ಮಾಡತಕ್ಕ ದ್ರೋಹ, ದುರಭಿಮಾನತನ, ಆತ್ಮಘಾತುಕತನ, ಹುಟ್ಟಿದ ಮಗುವಿನ ಕತ್ತನ್ನು ಹಿಸುಕುವ ಕೆಲಸ.

(ಶ್ರೀ ಶಿವರಾಮೇಗೌಡರು ಮಧ್ಯ ಏನೋ ಮಾತನಾಡತೊಡಗಿದರು)

ಶ್ರೀ ವಾಟಾಳ್ ನಾಗರಾಜ್ : ನಾನು ಈಲ್ಡ್ ಆಗಿಲ್ಲ, ನಾನು ಕೂರುವುದಿಲ್ಲ. ಮಾನ್ಯ ಶಿವರಾಮೇಗೌಡರು ಇಂಗ್ಲಿಷ್‌ವಾದಿಗಳು. ಇಂಗ್ಲಿಷ್‌ವಾದಿಗಳ ಜೊತೆಯಲ್ಲಿ ನಾನು ವಾದ ಮಾಡುವುದಕ್ಕೆ ತಯಾರಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಕ್ರಿಯಾಲೋಪ ಎತ್ತುತ್ತೇನೆ.

ಉಪಾಧ್ಯಕ್ಷರು : ಅವರು ಕ್ರಿಯಾಲೋಪ ಎತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಸಾಧ್ಯವಿಲ್ಲ, ಇಂಗ್ಲಿಷ್ ವಾದಿಗಳ ಮಾತಿಗೆ ನಾನು ಕಿವಿಗೊಡುವುದಿಲ್ಲ. ಆಂಗ್ಲ ಭಾಷೆಯ ಬೆಂಬಲಿಗರ ಜೊತೆ ನಾನು ಮಾತನಾಡುವುದಿಲ್ಲ.

ಉಪಾಧ್ಯಕ್ಷರು : ನಿಮಗೆ ಇನ್ನು ಹತ್ತು ನಿಮಿಷ ಟೈಂ ಇದೆ.

ಶ್ರೀ ವಾಟಾಳ್ ನಾಗರಾಜ್: ಮಧ್ಯೆ ಇವರೇ ತೊಂದರೆ ಕೊಡುತ್ತಿದ್ದಾರೆ.

ಉಪಾಧ್ಯಕ್ಷರು : ಇನ್ನೊಬ್ಬರಿಗೆ ತೊಂದರೆ ಮಾಡಿದರೆ ಹೇಗೆ ಆಗುತ್ತದೆ. ದಯವಿಟ್ಟು ನೀವು ಕುಳಿತುಕೊಳ್ಳಿ, ಅವರು ಮುಗಿಸಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರು ಮಾತನಾಡಿರತಕ್ಕದ್ದು ರೆಕಾರ್ಡ್‌ಗೆ ಹೋಗಿದೆ. ವಾಟಾಳ್ ನಾಗರಾಜ್ ಅವರು ಆಗಲೇ ತೊಂದರೆ ಕೊಟ್ಟಿದ್ದಾರೆ. ತಿರುಗಾ ತೊಂದರೆ ಕೊಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ.

ಶ್ರೀ ಆರ್. ದಯಾನಂದ ರಾವ್ : ಅಧ್ಯಕ್ಷರೇ, Point of order.

ಉಪಾಧ್ಯಕ್ಷರು : ಈಗ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ಎಂ. ಪಿ. ವೆಂಕಟೇಶ್ : ಇಬ್ಬರು ಪಾಯಿಂಟ್ ಆಫ್ ಆರ್ಡರ್ ಹೇಳಿದರೆ ಯಾರದನ್ನು ಕೇಳಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ : 72 ಜನ ಶಾಸಕರು ಸಹಿ ಮಾಡಿ ಕೊಟ್ಟಿರತಕ್ಕದ್ದು ಇಡೀ ರಾಜ್ಯದಲ್ಲಿ ನಾಯಿಕೊಡೆಗಳಂತೆ ಬೆಳೆಯುತ್ತಿರುವ ಇಂಗ್ಲೀಷ್ ಶಾಲೆಗಳ ಬಗ್ಗೆ ಸರ್ಕಾರ ತಮ್ಮ ಅಭಿಪ್ರಾಯ ವ್ಯಕ್ತ ಮಾಡಬೇಕು, ತೀರ್ಪನ್ನು ಕೊಡಬೇಕು ಎಂಬ ವಿಚಾರದ ಬಗ್ಗೆ. ನನ್ನ ಭಾಷಣದಲ್ಲಿ ಹೇಳಿದ್ದೇನೆ. ಇಂಗ್ಲೀಷ್ ಕಲಿಸತಕ್ಕ ವಿಚಾರ ವಾಟಾಳ್ ನಾಗರಾಜ್ ಅವರಿಗೆ ಬೇಡ ಮತ್ತು ಶಿವರಾಮೇಗೌಡರಿಗೆ ಬೇಡ, ಯಾರು ಜನ್ಮ ಕೊಟ್ಟಿದ್ದಾರೋ ಆ ತಂದೆತಾಯಿಗಳಿಗೆ ಬಿಡೋಣ. ನಮಗೆ ಬೇಡ ಎಂಬ ಮಾತನ್ನು ಹೇಳಿದ್ದೇನೆ. ಅವರು ಇಲ್ಲದ್ದೆಲ್ಲಾ ಹೇಳಿಬಿಟ್ಟು ನಾವು ಇಂಗ್ಲೀಷ್ ಪರವಾಗಿರತಕ್ಕವರು, ಕನ್ನಡ ದ್ರೋಹಿಗಳು ಎಂದು ಪತ್ರಿಕೆಯಲ್ಲಿ ಬರೆಸಿ ಇಲ್ಲದ ಗಲಾಟೆ ಮಾಡಿಸಿದ್ದಾರೆ, ಅಧ್ಯಕ್ಷರೆ, ನಾವು ಇವರ ತರಹ ದುರಭಿಮಾನಿಗಳಲ್ಲ, ಕನ್ನಡದ ಅಭಿಮಾನಿಗಳು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಶಿವರಾಮೇಗೌಡರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಯಾವ ರೂಲ್ ಕೆಳಗೆ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಎಂದು ಹೇಳಿದರೆ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು : ಪಾಯಿಂಟ್ ಆಫ್ ಆರ್ಡರ್ ಏನು ಹೇಳಿ. ಏನೂ ಇಲ್ಲವಾ? ಹಾಗಾದರೆ ವಾಟಾಳ್ ನಾಗರಾಜ್ ಅವರೇ ಮುಂದುವರೆಸಿ.

ಶ್ರೀ ರಾಮಲಿಂಗ ರೆಡ್ಡಿ : ವಾಟಾಳ್ ನಾಗರಾಜರ ಮಕ್ಕಳು ಕಾನ್‌ವೆಂಟಿಗೆ ಹೋಗುತ್ತಿದ್ದಾರೊ ಅಥವಾ ಕನ್ನಡ ಶಾಲೆಗೆ ಹೋಗುತ್ತಿದ್ದಾರೊ ಎಂಬ ಬಗ್ಗೆ ಕ್ಲಾರಿಫಿಕೇಷನ್ ಬೇಕು.

(ಮುಂದಲ)

ಉಪಾಧ್ಯಕ್ಷರು : ಶ್ರೀಯುತ ವಾಟಾಳ್ ನಾಗರಾಜ್ ಅವರೇ ತಾವು ಮುಂದುವರೆಸಿ.

ಶ್ರೀ ರಾಮಲಿಂಗ ರೆಡ್ಡಿ : ವಾಟಾಳ್ ಅವರನ್ನು ಕ್ಲಾರಿಫಿಕೇಷನ್ ಕೇಳಿದೆ.

ಉಪಾಧ್ಯಕ್ಷರು : ಅವರು ಹೇಳುವುದಿಲ್ಲ ಎಂದು ಹೇಳಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ನಾಳೆ ಮುಂದುವರೆಸಬಹುದು.

ಉಪಾಧ್ಯಕ್ಷರು : ಇಲ್ಲ ಇವತ್ತು ಡಿಸ್ಕಷನ್ ಕ್ಲೋಸ್. ಇನ್ನು ಐದು ನಿಮಿಷದಲ್ಲಿ ಅವರು ಮುಗಿಸುತ್ತಾರೆ. ತಾವು ಮುಂದುವರೆಸಿ.

ಶ್ರೀ ವಾಟಾಳ್ ನಾಗರಾಜ್ : ನನ್ನ ಮಕ್ಕಳು ಯಾವ ಶಾಲೆಯಲ್ಲಿ ಓದುತ್ತಾರೆ ಎಂದು ಶ್ರೀಮಾನ್ ರಾಮಲಿಂಗ ರೆಡ್ಡಿಯವರು ಕೇಳಿದ್ದಾರೆ.

ಉಪಾಧ್ಯಕ್ಷರು : ಉತ್ತರ ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಉತ್ತರ ಹೇಳುತ್ತೇನೆ. ಅಷ್ಟು ಧೈರ್ಯ ಇಲ್ಲವೆ? ನನಗೆ ಧೈರ್ಯ ಇರುವಾಗ ನಾನು ಏತಕ್ಕೆ ಇನ್ನೊಬ್ಬರಿಗೆ ಹೆದರಬೇಕು? ಮಾನ್ಯ ಮೊಯಿಲಿ ಅವರು ಶಿಕ್ಷಣ ಸಚಿವರು ಕೇಳಿ. ನನ್ನ ಮಕ್ಕಳು ಯಾವ ಶಾಲೆಯಲ್ಲಿ ಓದುತ್ತಾರೆ, ಇಂಗ್ಲೀಷ್ ಮಾಧ್ಯಮವೇ, ಕನ್ನಡ ಮಾಧ್ಯಮವೇ ಎಂದು ನನ್ನ ಮಿತ್ರರಾದ ರಾಮಲಿಂಗ ರೆಡ್ಡಿಯವರು ಕೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಶೋಧನೆ ನಾನು ಮಾಡುವುದಕ್ಕೆ ಸಿದ್ದ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ವಿದ್ಯಾ ಸಚಿವರನ್ನು ಕೇಳುಕೊಳ್ಳುತ್ತಿದ್ದೇನೆ. ತಾವೇ ಹೇಳಿ ನಾಳೆ ಬೆಳಗ್ಗೆ 12 ಘಂಟೆ ಒಳಗೆ ತನಿಖೆ ನಡೆಸಿ. ಒಬ್ಬ ಮಗ ಮೈಸೂರಿನಲ್ಲಿ ಓದುತ್ತಿದ್ದಾನೆ. ಒಬ್ಬ ಮಗಳು ಮಹಾರಾಣಿ ಕಾಲೇಜಿನಲ್ಲಿ ಓದುತ್ತಿದ್ದಾಳೆ. ಅವರಿಬ್ಬರು ಕನ್ನಡ ಬಿಟ್ಟು ಬೇರೆ ಶಾಲೆಯಲ್ಲಿ ಓದುತ್ತಿದ್ದಾರೆ ಎಂದು ಆದರೆ ನಾಳೆ 1 ಘಂಟೆಗೆ ತಮಗೆ ರಾಜೀನಾಮೆ ಕೊಡುತ್ತೇನೆ ಛಲ ಒಂದೇ ಕನ್ನಡ ನುಡಿ ಒಂದೇ ಕನ್ನಡ, ನೆಲ ಒಂದೇ ಕನ್ನಡ. ಹೊಣೆಗೇಡಿ ದುರಭಿಮಾನದ ಬಗ್ಗೆ ಮಾತನಾಡತಕ್ಕದ್ದಲ್ಲ. ಕನ್ನಡ ಒಂದೇ, ಕನ್ನಡ ನೆಲ ಒಂದೇ, ಕನ್ನಡ ನುಡಿ ಒಂದೇ.

ಉಪಾಧ್ಯಕ್ಷರು : ಆಯಿತಲ್ಲ, ಸ್ಕೂಲಿನದು. ಮುಗಿಯಿತು.

ಶ್ರೀ ವಾಟಾಳ್ ನಾಗಾರಜ್ : ದಯಮಾಡಿ ಕೇಳಿ. ರಾಜಕೀಯ ವಿಡಂಬನೆ.

ಶ್ರೀ ಆರ್. ದಯಾನಂದ ರಾವ್ : ಕಾಲೇಜಿಗೆ ಹೋದಮೇಲೆ ಇಂಗ್ಲೀಷ್ ಕಲಿಯಲೇಬೇಕಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ಮೈಸೂರಿನಲ್ಲಿ ಓದುತ್ತಿರುವ ತರಗತಿಯಲ್ಲಿ ಇಂಗ್ಲೀಷ್ ಪಠ್ಯ ಇದೆಯೋ ಇಲ್ಲವೋ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಒಬ್ಬಟ್ಟು ಎಂಬುದಕ್ಕೆ ಇಂಗ್ಲೀಷಿನಲ್ಲಿ ಏನು ಎಂದು ಕೇಳಿದಹಾಗೆ ಇದು. ಈ ಬೂಟ್ಸ್ ಎಂದರೆ ಇಂಗ್ಲೀಷ್‌ನಲ್ಲಿ ಏನೆಂದು ಕೇಳಿದಹಾಗೆ ಆಯಿತು. ಕೆಲವು ಇಂಗ್ಲೀಷ್ ಪದಗಳನ್ನು ನಾವು ಕನ್ನಡಕ್ಕೆ ತೆಗೆದುಕೊಳ್ಳಬೇಕು, ನೆಂಟಸ್ಥನದಲ್ಲಿ, ತೀರಾ ಇಂಗ್ಲೀಷ್‌ಗೇ ಹೋಗಿಬಿಟ್ರೆ, ಅಲ್ಲಿ ವಾದೇಕ ಎಂದರೆ ನಮಗೆ ಅರ್ಥವಾಗುವುದಿಲ್ಲ. ಅದು ವಿದೂಷಕ ಎಂದಾಗುತ್ತದೆ. ಈಗ ಪೋಲೀಸ್ ಎನ್ನುವ ಬದಲು ಆರಕ್ಷಕ ಎಂದರೆ ಅರ್ಥವಾಗುವುದಿಲ್ಲ, ಆದುದರಿಂದ ದಯಮಾಡಿ ಪೋಲೀಸ್ ಎಂದು ಹೇಳಿದರೆ ತಪ್ಪಾಗುವುದಿಲ್ಲ, ಆಕಾಶ ಕಳಚಿಬೀಳುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ವಾಟಾಳ್ ನಾಗರಾಜ್ ಅವರು ಅವಕಾಶ ಸಿಂಧುಗಳು.

ಶ್ರೀ ವಾಟಾಳ್ ನಾಗರಾಜ್ : ಕನ್ನಡ ಸಾಹಿತ್ಯ ಅನೇಕ ಸಾಹಿತ್ಯಗಳಿಂದ ಕೆಲವು ಪದಗಳನ್ನು ಪಡೆದು ದೊಡ್ಡ ಸಂಪತ್ತಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನೇಕರು ಬೇರೆ ಭಾಷೆಯಿಂದ ಬಂದಂತಹ ಹಿರಿಯರು ಈ ನಾಡಿನ ಭವ್ಯ ಪರಂಪರೆಯನ್ನು ಎತ್ತಿಹಿಡಿದಂತಹವರು ಇದ್ದಾರೆ. ಇಂತಹ ಸಾಹಿತಿಗಳ, ಕವಿಗಳ ಹೆಸರನ್ನು ಹೇಳಬೇಕೇ? ಕವಿ ನಿಸ್ಸಾರ್ ಅಹ್ಮದ್ ಅವರು ಹತ್ತು ವರ್ಷಗಳ ಹಿಂದೆ ರಾಜಕೀಯದ ಬಗ್ಗೆ ಒಂದು ವಿಡಂಬನೆ ಬರೆದಿರತಕ್ಕದ್ದು ಇದೆ. ಕನಕಪುರದ ನವ್ಯಕವಿಯಾದ ನಿಸ್ಸಾರ್ ಅಹ್ಮದ್‌ರವರು 10 ವರ್ಷಗಳ ಹಿಂದೆ ಬರೆದ ವಿಡಂಬನೆಯನ್ನು ಇಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಕವಿಗಳ ಸಹವಾಸ ಮಾನ್ಯ ಮೊಯ್ಲಿಯವರಿಗೂ ಬಂದಿತ್ತು, ಮಾನ್ಯ ರಂಗನಾಥ್‌ರವರಿಗೂ ಬಂದಿತ್ತು, ಏಕೆಂದರೆ ಆ ಇಲಾಖೆಯನ್ನು ಇಟ್ಟುಕೊಂಡಿದ್ದರು. ಈ ಬಗ್ಗೆ ತಮಗೆ ಸಹವಾಸ, ಚಿಂತನೆ ಇದೆ.

ಕುರಿಗಳು ಸಾರ್ ಕುರಿಗಳು ಸಾಗಿದ್ದೇ ಗುರಿಗಳು.
ಮಂದೆಯಲಿ ಒಂದಾಗಿ ಸ್ವಂತತೆಯೇ ಬಂದ್ ಆಗಿ,
ಅದರ ಬಾಲ ಇದು ಮೂಸಿ ಇದರ ಬಾಲ ಅದು ಮೂಸಿ
ದನಿ ಕುಗ್ಗಿಸಿ ತಲೆ ತಗ್ಗಿಸಿ
ಅಂದಲೆಯುತ್ತಿರುವ ನಾವು ನೀವು ಕುರಿಗಳು ಸಾರ್! ಕುರಿಗಳು!
ಎಡದಿಕ್ಕಿಗೆ - ಓ - ಬಲದಿಕ್ಕಿಗೆ ಒಮ್ಮೆ ದಿಕ್ಕು ಪಾಲಾಗಿ
ಹೇಗೋ ಹೇಗೋ ಏಗುತ್ತಿರುವ ನಾವು ನೀವು ಎಲ್ಲರೂ ಕುರಿಗಳು
ಸಾರ್! ಕುರಿಗಳು!

ಬರಿ ಕಿರುಚಿ ರೇಗುತ್ತಿರುವ
ತಿನ್ನದಿದ್ದರೂ ತೇಗುತ್ತಿರುವ
ನೊಣ ಕೂತರೂ ಬಾಗುತ್ತಿರುವ
ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒಡೆಯದ
ನಾವು ನೀವು ಅವರು ಇವರು ಕುರಿಗಳು ಸಾರ್,
ನಮ್ಮ ಕಾಯ್ವ ಕುರುಬರು
ಶಾನುಭೋಗ ಗೀಚಿದ್ದಕ್ಕೆ ಹೆಬ್ಬೆಟ್ಟನ್ನು ಒತ್ತುವ
ನಮ್ಮ ಕಾಯ್ವ ಕುರುಬರು
ಜಮಾಬಂದಿಗೆ ಅಮಲ್ದಾರ ಬರಲು
ನಮ್ಮಲ್ಲೆ ಒಬ್ಬನನ ಮೆಚ್ಚಿ ಮದದ ಮಚ್ಚ ಹಿರಿದು
ಕತ್ತ ಕಚಕ್ ಎಂದು ಕೊಚ್ಚಿ
ಬಿರಿಯಾನಿಯ ಮೆಹರುಬಾನಿಯ ಮಾಡಿ
ಕೈಜೋಡಿಸುತ್ತಾ ಕಿಸಿಗೆ ಹಸಿರು ನೋಟ ತುರುಕಿ
ನುಡಿಗೆ ಬೆಣ್ಣೆ ಹಚ್ಚುವವರು
ನಮ್ಮ ಕಾಯ್ವ ಕುರುಬರು
ಬಿಸಿಲಿನಲ್ಲಿ ನಮ್ಮ ದೂಡಿ ಮರದಡಿಯಲ್ಲಿ ತಾವು ಕೂತು
ಮಾತು ಮಾತು ಮಾತು ಮಾತಿನ ಗೈರುತ್ತಿನಲ್ಲೇ
ಕರಾಮತ್ತು ನಡೆಸುವವರು ನಮ್ಮ ಕಾಯ್ವ ಕುರುಬರು
ನಮ್ಮ ಮೈಯ ತುಪ್ಪಟವ ರವಸ್ಯೂ ಬಿಡದಂತೆ ಸವರಿ

ಕಂಬಳಿಗಳ ನೇಯುವ ಯೋಜನೆಗಳ ಹಾಕುವವರು
ನಮ್ಮ ಕಾಯ್ವ ಕುರುಬರು
ಕಾಯುವ ಕುರುಬ ತಳವೂರಿದ ಮೇಲೆ
ಕಟುಕನಾದ
ಅವರ ಮಚ್ಚಿಗೆ ಆಹಾ! ಅದೇನು ಹೊಳಪು!
ಅದೇನು ಜಾದು
ಕತ್ತರಿಸುವ ಅವನ ಕತ್ತಿಯ ನೆಕ್ಕಲು
ಅದೇನು ಅನುವು
ಆಹಾ ಅದೇನು ಅವಸರ
ನಮಗೆ ನಿಮಗೆ ಎಲ್ಲಾ
ಕುರಿಗಳು ಸಾರ್ ಕುರಿಗಳು ಸಾಗಿದ್ದೇ ಗುರಿಗಳು
ಕುರಿಗಳು ಸಾರ್ ಕುರಿಗಳು.

ಹತ್ತು ವರ್ಷಗಳ ಹಿಂದೆ ಈ ರಾಜಕಾರಣ ಏನಾಗಿದೆ ಎನ್ನುವ ಬಗ್ಗೆ ಒಂದು ರಾಜಕೀಯ ವಿಡಂಬನೆಯನ್ನು ಬರೆದಿರತಕ್ಕದ್ದು ಇಂತಹ ಭವ್ಯವಾದ ಕವಿತೆಯನ್ನು ಕವಿ ನಿಸ್ಸಾರ್ ಅಹ್ಮದ್ ಅವರು ಬರೆದಿದ್ದಾರೆ. ಇಂತಹ ನೂರಾರು ಕವಿತೆಗಳನ್ನು ಬರೆದಿದ್ದಾರೆ.

6-00 ಪಿ.ಎಂ.

ನಾವು ಎಷ್ಟು ಹೇಳಿದರೂ ಕೂಡ ಕೋಣನ ಮುಂದೆ ಕಿಂದರಿ ಬಾರಿಸಿದ ಹಾಗೆ. ಅದರಲ್ಲಿ ಎನೂ ಇಲ್ಲ. ಇತ್ತೀಚಿನ ದಿನಗಳಲ್ಲಿ ಈ ರಾಜ್ಯ ಪ್ರಶಸ್ತಿಗಳು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು, ರಾಷ್ಟ್ರದ ಪ್ರಶಸ್ತಿಗಳು ಏನು ಬರುತ್ತಿವೆ ಇದನ್ನು ಕೊಡುವವರು ಯಾರು, ಈ ಪ್ರಶಸ್ತಿಗಳನ್ನು ತೆಗೆದುಕೊಂಡಿರತಕ್ಕಂತಹವರು ಯಾರು, ಅವರ ಅರ್ಹತೆ ಏನು ಇದನ್ನು ಬಹಳ ಗಹನವಾಗಿ ವಿಚಾರ ಮಾಡಬೇಕು. ಇವತ್ತು ಏನಾಗಿದೆ ಎಂದರೆ, ಪ್ರಶಸ್ತಿಗಳೆಲ್ಲಾ ವ್ಯಾಪಾರದ ವಸ್ತುಗಳಾಗಿವೆ. ಯಾರಿಗೋ ಹಣ ಕೊಟ್ಟು ಎಲ್ಲಿಂದ ಎಲ್ಲಿಗೆ ಬೇಕಾದರೂ ತೆಗೆದುಕೊಳ್ಳಬಹುದು. ಇದು ಎಲ್ಲಿಯವರೆಗೆ ನಡೆಯುತ್ತದೆ ಎಂದರೆ, ರಾಷ್ಟ್ರ ಪ್ರಶಸ್ತಿಯಿಂದ ರಾಜ್ಯ ಪ್ರಶಸ್ತಿಯವರೆಗೆ ಇದು ನಡೆಯುತ್ತಿದೆ. ಒಂದು ಕಾಲದಲ್ಲಿ ಪ್ರಶಸ್ತಿಗಳು ಬಂದರೆ ಪತ್ರಿಕೆಯ ಮುಖಪುಟದಲ್ಲಿ ಇಂತಹವರಿಗೆ ಪ್ರಶಸ್ತಿಗಳು ಬಂದಿದೆ ಎಂದು ಪತ್ರಕರ್ತರೇ ಹಾಕುತ್ತಿದ್ದರು ಈಗ ನಾವೇ ಪ್ರಶಸ್ತಿ ಬಂದಿದೆ, ನನಗೆ ಪ್ರಶಸ್ತಿ ಬಂದಿದೆ ಎಂದು ಜಾಹೀರಾತು ಹಾಕಿಕೊಳ್ಳಬೇಕಾದ ಪ್ರಸಂಗ ಬಂದಿದೆ. ಯಾರಿಗೇ ಆಗಲೀ ಈ ಪ್ರಶಸ್ತಿಗಳು ಕಾಲ ಕಸವಾಗಬಾರದು. ಡಾಕ್ಟರೇಟ್‌ಗಳಾಗಲೀ, ಪ್ರಶಸ್ತಿಗಳಾಗಲೀ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಾಗಲೀ ಕಾಲಕಸವಾಗಬಾರದು. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಯಾರ್ಯಾರಿಗೆ ಯಾವ ಹಿನ್ನೆಲೆಯಲ್ಲಿ ಕೊಟ್ಟಿದ್ದಾರೆನ್ನುವ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಯಾವ್ಯಾವುದೋ ರೂಪದಲ್ಲಿ ಬೇಕಾದವರಿಗೆ, ಇಷ್ಟು ಬಂದವರಿಗೆ ಏನು ಪ್ರಶಸ್ತಿಗಳನ್ನು ಕೊಡತಕ್ಕಂಥಾದ್ದು?

ಇದುವರೆಗೂ ಕೊಟ್ಟಿರತಕ್ಕಂತಹ ಪ್ರಶಸ್ತಿಗಳ ಬಗ್ಗೆ ಕನಿಷ್ಟ ಯಾರಾದರೂ ದೊಡ್ಡ ನ್ಯಾಯಾಧೀಶರಿಂದ ತನಿಖೆ ಮಾಡದಿದ್ದರೂ ಕೂಡ ಪ್ರಾಮಾಣಿಕವಾಗಿರತಕ್ಕಂತಹ ಇಲಾಖೆಯ ಐ.ಎ.ಎಸ್. ಅಧಿಕಾರಿಯಿಂದ ತನಿಖೆ ಮಾಡಿಸಿ ಸಾಕು. ಯಾರಿಗೆ ರಾಷ್ಟ್ರಪ್ರಶಸ್ತಿ, ರಾಜ್ಯ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಇತ್ತೀಚೆಗೆ ನೀಡಿದ್ದಾರೆ. ಏತಕ್ಕೋಸ್ಕರ ನೀಡಿದ್ದಾರೆ ಎಂಬ ಬಗ್ಗೆ ತನಿಖೆ ಮಾಡಿಸಬೇಕು. ಹಿಂದೆ ಒಂದು ಕಾಲದಲ್ಲಿ ಅಂದರೆ 10 ವರ್ಷಗಳ ಹಿಂದೆ 36 ಪ್ರಶಸ್ತಿಗಳು ಇತ್ತು ಈಗ 136 ಪ್ರಶಸ್ತಿಗಳು ಆಗಿವೆ ಅಂದರೆ ವಿವಿಧ ರಂಗಗಳಲ್ಲಿ ಸೇವೆ ಮಾಡತಕ್ಕಂತಹ ಜನ

ಈಗ ಜಾಸ್ತಿಯಾಗಿರಬಹುದೆಂದು ಅನ್ನಿಸುತ್ತದೆ. ಈ ಪ್ರಶಸ್ತಿ ತೆಗೆದುಕೊಳ್ಳುವವರಿಗಾದರೂ ಆತ್ಮಗೌರವ ಬೇಕು. ನಾನು ಈ ಪ್ರಶಸ್ತಿ ತೆಗೆದುಕೊಳ್ಳುತ್ತೇನೆ ನನಗೆ ಯೋಗ್ಯತೆ ಇದೆಯೇ ಪದ್ಮಭೂಷಣ, ಪದ್ಮವಿಭೂಷಣ, ಪದ್ಮಶ್ರೀ ಇವನ್ನು ತೆಗೆದುಕೊಳ್ಳುವುದು ನ್ಯಾಯವೇ ನನಗೇಕೆ ಇದನ್ನು ಇದ್ದಕ್ಕಿದ್ದ ಹಾಗೆ ಕೊಟ್ಟರು ಇದನ್ನು ಪಡೆಯಲು ನನ್ನಲ್ಲಿ ಏನು ಅರ್ಹತೆ ಇದೆ ಎಂದು ಇವನ್ನೆಲ್ಲಾ ನೋಡಬೇಕು. ಈ ವಿಚಾರದಲ್ಲಿ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಇಂತಹ ಪ್ರಶಸ್ತಿಗಳನ್ನು ಇಂತಹವರಿಗೆ ಕೊಡಬೇಕೆಂದು ರಾಜ್ಯ ಸರಕಾರದ ಯಾವ ತನಿಖೆಯಿಂದ ರೆಕಮೆಂಡ್‌ಆಗಿ ಹೋಯಿತು, ಯಾರು ಇದನ್ನು ಬರೆದರು, ನಂತರ ಇದು ಯಾರಿಗೆ ಹೋಯಿತು ಎಂಬ ಬಗ್ಗೆ ವಿಚಾರ ಮಾಡಬೇಕು. ಈ ಪ್ರಶಸ್ತಿಗಳು ಕಾಲ ಕಸವೇ ಇಂತಹ ಪ್ರಶಸ್ತಿಗಳಿಗೆ ಭವ್ಯ ಪರಂಪರೆ ಇದೆ, ಗೌರವ ಇದೆ. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ಇಲ್ಲಸ್ಟ್ರೇಟೆಡ್ ವೀಕ್ಲಿಯಲ್ಲಿ ಇವೆಲ್ಲಾ ಕೆಲಸಕ್ಕೆ ಬಾರದ ಪ್ರಶಸ್ತಿಗಳೆಂದು ಒಂದು ದೊಡ್ಡ ಇತಿಹಾಸವನ್ನು ಬರೆದಿದ್ದಾರೆ. ಯಾವುದೋ ಒತ್ತಡಕ್ಕೆ ಯಾವುದೋ ರೂಪದಲ್ಲಿ ಹಣವನ್ನು ಸಂಪಾದನೆ ಮಾಡುವುದು, ಹಣ ಕೊಡುವುದು, ವ್ಯಾಪಾರಕ್ಕೋಸ್ಕರ ಪ್ರಶಸ್ತಿಗಳು ತೆಗೆದುಕೊಳ್ಳತಕ್ಕಂಥಾದ್ದು ನಡೆದಿದೆ. ನಾನು ಇದರ ಬಗ್ಗೆ ರಾಷ್ಟ್ರಪತಿಯವರಿಗೆ ತಂತಿ ಮೂಲಕ ಕಳಿಸಬೇಕೆಂದಿದ್ದೇನೆ. ನನಗೆ ಬಹಳ ನೋವಾಗುತ್ತದೆ. ನನಗೆ ರಾಜ್ಯ ಪ್ರಶಸ್ತಿಯನ್ನು ಕೊಡಿ ಎಂದು ನಾನು ಯಾವಾಗಲೂ ಕೇಳುವುದಕ್ಕೆ ಹೋಗುವುದಿಲ್ಲ. ಪ್ರತಿ ವರ್ಷ 25 ಜನರಿಗೆ ಒಬ್ಬೊಬ್ಬರಿಗೆ 25 ಸಾವಿರ ರೂಪಾಯಿ ಶಾಲು ಪ್ರಶಸ್ತಿ ಮೂಲಕ ಕೊಡುತ್ತೀರಲ್ಲ ಅವರ ಹಿನ್ನೆಲೆಯನ್ನು ತಾವು ನೋಡಿದ್ದೀರಾ?

ಆಗಸ್ಟ್ 15 ರಂದು ಮಾನ್ಯ ರಾಜ್ಯಪಾಲರು ಟೀ ಪಾರ್ಟಿ ಕೊಡುತ್ತಾರೆ. ಆಗ ಊರಿನಲ್ಲಿರುವ ಮಾರವಾಡಿಗಳು ಅಲ್ಲಿಗೆ ತಲೆಗೆ ಟೋಪಿ ಕಟ್ಟಿಕೊಂಡು ಬಂದು ನಾನೂ ರಾಜ್ಯಪಾಲರ ಪಕ್ಕದಲ್ಲಿದ್ದೆ, ಪಕ್ಕದಲ್ಲಿದ್ದೆ ಎಂದು ತೋರಿಸಿಕೊಳ್ಳುತ್ತಾರೆ. ಬ್ಲಾಕ್ ಮಾರ್ಕ್‌ಟ್ ಮಾಡುವವರು ಬರುತ್ತಾರೆ. ನನ್ನ ಮಾತು ಸುಳ್ಳಾಗಿದ್ದರೆ ತನಿಖೆ ನಡೆಸಿ, ಇವರ ಹಿನ್ನೆಲೆ ಗೊತ್ತಾಗುತ್ತದೆ. ಈ ಮಾತನ್ನು ನಾನು ಹೇಳುತ್ತೇನೆಂದರೆ, ಅದು ಹೇಗೆ ಹೇಳುತ್ತೀರಿ ವಾಟಾಳ್ ನಾಗಾರಾಜ್‌ರವರೆ, ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಪ್ರಶಸ್ತಿ ತೆಗೆದುಕೊಂಡವರು ಹೇಳುತ್ತಿದ್ದಾರೆ. ಅಧ್ಯಕ್ಷರೇ, ಇವರು ನನ್ನ ಕಾಲು ಮುರಿಸುತ್ತಾರಂತೆ ಅಂದರೆ ಈ ಪ್ರಶಸ್ತಿ ತೆಗೆದುಕೊಳ್ಳುವುದಕ್ಕೆ ಇವರಿಗೆ ಯೋಗ್ಯತೆ ಇದೆಯೇ? ಪ್ರಶಸ್ತಿ ತೆಗೆದುಕೊಂಡವರು ಈ ಮಟ್ಟಕ್ಕೆ ಇಳಿದರೆ ಹೇಗೆ. ನನ್ನ ಕಾಲು ಬಹಳ ಗಟ್ಟಿಯಾಗಿದೆ. ಅಷ್ಟು ಸುಲಭ ಅಲ್ಲ ನನ್ನ ಕಾಲು ಮುರಿಸುವುದು. ಇಂತಹ ಕರಾಳ ಜನರನ್ನು ಬಯಲಿಗೆ ಎಳೆಯುವುದೇ ನನ್ನ ಸಿದ್ಧಾಂತ. ಎಂತೆಂತಹ ಮೇಧಾವಿಗಳು, ನಾಡಿನ ಪುಣ್ಯ ಪುರುಷರು, ತ್ಯಾಗ ಮಾಡಿದಂತಹವರಿಗೆ ಪ್ರಶಸ್ತಿಗಳು ದೊರಕಿವೆ. ಆದರೆ ಇವತ್ತು ಈ ಪ್ರಶಸ್ತಿಗಳು ನಾಯಿಗಿಂತ ಕಡೆಯಾಗಿರತಕ್ಕಂತಹ ಕೆಲವರಿಗೆ ದೊರಕಿರತಕ್ಕಂಥಾದ್ದು ಏನು ಇದೆ ಈ ಬಗ್ಗೆ ಸಮಗ್ರವಾಗಿ ತನಿಖೆಯಾಗಲೇಬೇಕು, ಚಿಂತನೆಯಾಗಲೇ ಬೇಕು.

ಬೆಳಕವಾಡಿ ಪೋಲೀಸ್ ಸ್ಟೇಶನ್‌ನಲ್ಲಿ ಯಾರೋ ಮಾಡಿದ ಪಾಪಕ್ಕೆ ಸಬ್‌ಇನ್ಸ್‌ಪೆಕ್ಟರ್ ಮತ್ತು ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಇಬ್ಬರೂ ಯಾವುದೋ ಊರಿನಿಂದ ಮದುವೆಯಾಗುವುದಕ್ಕೆ ಬಂದ ಹುಡುಗ ಹುಡುಗಿ ಮತ್ತೊಬ್ಬರು ಇವರನ್ನು ಕರೆದುಕೊಂಡು ಹೋಗಿ ಊರೊಳಗೆ ಮೆರವಣಿಗೆ ಮಾಡಿದ್ದಾರೆ. ಅವರು ಪರಿಶಿಷ್ಟ ಜಾತಿಗೆ ಸೇರಿದವರು. ಅವರಿಗೆ ಬಳಿಹಾಕಿ ಊರೆಲ್ಲ ಮೆರವಣಿಗೆ ಮಾಡಿದ್ದಾರೆ. ಒಬ್ಬರ ಹೆಸರು ನಂಜಯ್ಯ, ಇನ್ನೊಬ್ಬರು ಸಿದ್ಧಲಿಂಗಮೂರ್ತಿ, ಮತ್ತೊಬ್ಬರು. ಇವರಿಗೆ ಬಳಿಹಾಕಿ ಬೆಳಕವಾಡಿ ಊರಲ್ಲೆಲ್ಲ ಮೆರವಣಿಗೆ ಮಾಡಿದ್ದಾರೆ. ಪಾಪ ಅವರ ಗತಿಯೇನು? ತಪ್ಪು ಮಾಡದವರಿಗೆ

ಬಳಿ ಹಾಕುವುದು. ತಪ್ಪು ಮಾಡಿದವರಿಗೆ ಪುರಸ್ಕಾರ ಮಾಡುವುದು ಏನಿದೆ, ಇದು ಸರಿಯಲ್ಲ. ಇದು ಸರಿಯಾದ ನೀತಿಯಲ್ಲ, ನ್ಯಾಯವಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ವಾಟಾಳ್‌ನಾಗರಾಜ್‌ರವರ ಕಿನ್ನೂರಿ ಸಂಗೀತ ಬಹಳ ಚೆನ್ನಾಗಿರುವುದರಿಂದ ಅವರ ಭಾಷಣವನ್ನು ನಾಳೆಗೆ ಒಂದು ಗಂಟೆ ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್: ನಾನು ಇಲ್ಲಿ ಕಿನ್ನೂರಿ ಸಂಗೀತ ಮಾಡತಕ್ಕ ಮೇಸ್ಟ್ರಲ್ಲ, ನಾನು ಪಂಚಸೂತ್ರದ ಬಗ್ಗೆ ಹೇಳುತ್ತೇನೆ. ಇವರ ಪಂಚಸೂತ್ರ ನನ್ನ ಭಾವನೆಯಲ್ಲಿ ಈ ರೀತಿ ಇದೆ. (1) ಧಾರಾಳವಾಗಿ ವರ್ಗಾವರ್ಗಿ ಮಾಡುವುದು (2) ಕನ್ನಡದ ಬೆಳವಣಿಗೆ ಬಗ್ಗೆ ಮೊಸಳೆ ಕಣ್ಣೀರು. ಮೈಸೂರಿನಲ್ಲಿ ಸಾಹಿತಿಗಳನ್ನು ಕರೆಯುವುದು. ರಾಷ್ಟ್ರಕವಿ ನಮ್ಮ ನಾಡಿನ ಹೆಮ್ಮೆಯ ಕುವೆಂಪು. ಅವರು ನಮ್ಮ ನಾಡಿನ ಒಬ್ಬ ಮೇಧಾವಿ, ಮೇರುಪರ್ವತ, ಹಿಮಾಲಯಪರ್ವತ. ನಿಮ್ಮ ಯೋಗ್ಯತೆಯನ್ನು, ನಿಮ್ಮ ಗೌರವವನ್ನು ಪ್ರದರ್ಶನ ಮಾಡಿಕೊಳ್ಳುವುದಕ್ಕೆ ಅವರ ಮನೆಗೆ ಹೋಗಿ ಅವರನ್ನು ಎರಡು ನಿಮಿಷ ದಯಮಾಡಿಸಿ ಸ್ವಾಮಿ ಎಂದು ಅವರನ್ನು ಕರೆದಿರಿ. ಪಾಪ ಅವರು ಬಂದರು. ಕೆ.ವಿ.ಪುಟ್ಟಪ್ಪನವರೇ ಕಾರ್ಯಕ್ರಮದಲ್ಲಿ ಭಾಗವಹಿಸಿದರು ಅಂದರೆ ಅವರಾಗಿಯೇ ಬಂದದ್ದಲ್ಲ. ನೀವಾಗಿ ಹೋಗಿ ಅತ್ತೂ ಕರೆದು 200 ಸಾಹಿತಿಗಳನ್ನು ಸೇರಿಸಿಬಿಟ್ಟರೆ ಕನ್ನಡದವರೆಲ್ಲ ನಮಗೆ ಜಯಕಾರ ಹಾಕುತ್ತಾರೆಂದು ಮಾಡಿದಿರಿ. ಕುವೆಂಪುರವರೂ ಹೋಗಿದ್ದರು, ನಾನು ಅವತ್ತು ಮೈಸೂರಿನಲ್ಲಿದ್ದೆ. ನಾನು ಅವತ್ತು ನಿಮ್ಮ ಸರ್ಕಾರದ ನೀತಿ ಮೊಸಳೆ ಕಣ್ಣೀರು ಎಂದು ಹೇಳಿದೆ. ಇದು ಎರಡನೆ ಸೂತ್ರ. ಮೂರನೇಯ ಸೂತ್ರ ಬಹಳ ಚೆನ್ನಾಗಿದೆ. (3) ಇಡ್ಲಿ ದೋಸೆಗಳಿಗೆ ಸೇಂದಿಯನ್ನು ಹಾಕಿಕೊಂಡು ತಿನ್ನುವುದು. ಅದಕ್ಕೆ ಸೇಂದಿಯನ್ನು ಸೇರಿಸಿದರೆ ರುಚಿಯಾಗಿರುತ್ತದೆನ್ನುವುದು (4) ಅಬಕಾರಿ ಗುತ್ತಿಗೆದಾರರ ಕೈಗೊಂಬೆಯಾಗಿರುವುದು ಐದನೆಯ ಸೂತ್ರ ಖಾಯಂ ಸೂತ್ರ (5) "ನಾನು ನಿಜ ಹೇಳಬೇಕೆಂದರೆ, ನಾನು ನಿಜ ಹೇಳಬೇಕೆಂದರೆ" ಈ ಐದು ಸೂತ್ರಗಳನ್ನು ಅವರು ಏನು ಹೇಳಿದ್ದಾರೆ ಅದಕ್ಕೆ ಇಷ್ಟು ವಿಚಾರಗಳನ್ನು ತಮ್ಮ ಮುಂದಿಟ್ಟಿದ್ದೇನೆ.

ತಾವು ನನಗೆ ಸಮಯ ಕೊಟ್ಟಿದ್ದರೆ ಇನ್ನು ಹೇಳುತ್ತಿದ್ದೆ. ನಾನು ಇನ್ನು ಒಂದೆರಡು ನಿಮಿಷಗಳಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನಾವು ಎಲ್ಲೋ ಅಪರೂಪಕ್ಕೊಮ್ಮೆ ಭಾಷಣ ಮಾಡುತ್ತೇವೆ. ನಾನು ಇನ್ನು ಮೂರು ನಿಮಿಷಗಳಲ್ಲಿ ಭಾಷಣ ಮುಗಿಸುತ್ತೇನೆ. ನಮ್ಮ ಸಚಿವ ಮಿತ್ರರೊಬ್ಬರು ಮೈಸೂರಿಗೆ ಹೋಗಿದ್ದರು. ನಾನು ಅವರ ಬಗ್ಗೆ ಜಾಸ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಮೈಸೂರಿನ ಪತ್ರಿಕೆಯಲ್ಲಿ ಬಂದಿದೆ. ಅವರು ಏನು ಹೇಳುತ್ತಾರೆಂದರೆ, ನನಗೆ ಯಾವ ಇಲಾಖೆ ಕೊಟ್ಟರೂ ನಾನು ಚೆನ್ನಾಗಿ ಕೆಲಸ ಮಾಡುತ್ತೇನೆ, ಕೊನೆಗೆ ಯಾವ ಇಲಾಖೆಯಾದರೂ ಕೊಡಲಿ,ಹೆಣ ಹೂಳುವ ಕೆಲಸದ ಇಲಾಖೆ, ಸ್ಮಶಾನದ ಇಲಾಖೆ ಕೊಟ್ಟರೂ ಕೆಲಸ ಮಾಡುತ್ತೇನೆಂದು ಹೇಳಿದರು. ನನಗನಿಸುತ್ತದೆ, ಈಗ ಅವರಿಗಿರತಕ್ಕ ಇಲಾಖೆಯನ್ನು ಬದಲಾವಣೆ ಮಾಡಿ ಹೆಣಹೂಳತಕ್ಕ ಇಲಾಖೆ ಇದ್ದರೆ ಅವರಿಗೆ ಕೊಟ್ಟರೆ ಸಂತೋಷವೆನಿಸುತ್ತದೆ. ಮತ್ತೊಬ್ಬರು ಸಚಿವರು ಚಿಕ್ಕಮಗಳೂರಿಗೆ ಹೋಗಿದ್ದರು. ಪೋಲೀಸರು ನನಗೆ ಏತಕ್ಕೆ ಗೌರವ ಕೊಡುವುದಿಲ್ಲ? ಗೌರವ ಕೊಡುತ್ತೀರೋ ಇಲ್ಲವೋ ಎಂದು ಪೋಲೀಸ್‌ನವರನ್ನು ರಾತ್ರಿಯೆಲ್ಲ ಅಟ್ಟಾಡಿಸಿಬಿಟ್ಟಿದ್ದಾರೆ. ಆ ಗೌರವ ಕೊಡುವುದು ಗೃಹಮಂತ್ರಿಗಳಿಗೆ ಮಾತ್ರ ಅವರಿಗೇನು ಗೊತ್ತು? ನನಗೆ ಗೌರವ ಕೊಡುತ್ತೀರೋ ಇಲ್ಲವೋ ಎಂದು ಹೇಳಿ ಚಿಕ್ಕಮಗಳೂರು ಪೋಲೀಸ್‌ನವರನ್ನು ರಾತ್ರಿಯೆಲ್ಲ ಅಟ್ಟಾಡಿಸಿಬಿಟ್ಟಿದ್ದಾರೆ. ಜಿಲ್ಲಾ ಪೋಲೀಸ್‌ನವರು ಆ ದಿನ ನಡುಗಿ ಹೋಗಿದ್ದಾರೆ. ಅದು ಹಿಂದೂ ಪತ್ರಿಕೆಯಲ್ಲಿ ಬಂದಿದೆ.

'ನನಗೆ ಗೌರವ ರಕ್ಷೆ ಕೊಟ್ಟೇ ಕೊಡಬೇಕು' ಎಂದು ಇವರು ಅಂದಾಗ 'ಇಲ್ಲ ಸ್ವಾಮಿ. ಗೃಹಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ಗೌರವ ರಕ್ಷೆ ಕೊಡುವುದು' ಎಂದು ಅವರು ಹೇಳಿದರೆ "ಇಲ್ಲ ನನಗೆ ಬೇಕೇಬೇಕು, ಬಂದೂಕು ಹಿಡಿದುಕೊಳ್ಳಲೇಬೇಕು, ತಲೆ-ಕೈ ಎತ್ತಲೇ ಬೇಕು" ಎಂದರು ಇವರು. ಅವರು ಮಂತ್ರಿಯಾಗಿದ್ದಾರೆ. ಅವರಿಗೆ ಬಡ್ತಿ ಸಿಗಬಹುದು ಎಂದು ಕಾಣುತ್ತದೆ. ಮುಂದೆ ಏನಾದರೂ ಬದಲಾವಣೆಯಾದರೆ ಬಡ್ತಿ ಸಿಗಬಹುದು. ನಾನು ಭವಿಷ್ಯ ಹೇಳುತ್ತಿದ್ದೇನೆ.ಬಹುಶಃ ಜೂನ್‌ವರೆಗೆ ಈ ಸರ್ಕಾರ ಇರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಜೂನ್‌ಗೆ ಈ ಸರ್ಕಾರ ಹೋಗುತ್ತದೆ ಎನ್ನತಕ್ಕಂಥ ಭವಿಷ್ಯ ನುಡಿದು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಮುಗಿದಿದೆ. ನಾಳೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವವರಿದ್ದಾರೆ. ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 9.30 ಗಂಟೆಗೆ ಮತ್ತೆ ಸೇರುತ್ತದೆ.

(ಸದನವು 6 ಗಂಟೆ 41 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 15ನೇ ಮಾರ್ಚ್ ಮಾಹೆ 1991ರ ಶುಕ್ರವಾರದಂದು 9.30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

MGITBP/MYS-65/GCP/BNG/93-94-680 Books.